

# INSTA ವಿದ್ಯಮಾನ

## ವಾರದ ಪ್ರಚಲಿತ ವಿದ್ಯಮಾನಗಳು

KAS, FDA/SDA/PDO/ GROUP C, PSI/PC, TEACHER'S EXAMS

**ಕನ್ನಡ & English**

By- ನಂದನ್ ಸರ್

**January 3rd Week 2026**

- 'ಸ್ಟಾರ್ಟ್-ಅಪ್ ಇಂಡಿಯಾ' ಉಪಕ್ರಮಕ್ಕೆ ಒಂದು ದಶಕ
- 2025: ದಾಖಲೆಯ ಅತ್ಯಂತ ಉಷ್ಣತೆಯ 'ಲಾ ನಿನಾ' ವರ್ಷ
- 3)'ವುಮನಿಯಾ' (Womaniya) ಉಪಕ್ರಮ
- ಬುಡಕಟ್ಟು ವೈದ್ಯರಿಗಾಗಿ ಭಾರತದ ಮೊದಲ ರಾಷ್ಟ್ರೀಯ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ
- ಕಾಮನ್‌ವೆಲ್ತ್ ರಾಷ್ಟ್ರಗಳ ಸಭಾಧ್ಯಕ್ಷರ ಮತ್ತು ಪೀಠಾಸೀನ ಅಧಿಕಾರಿಗಳ (CSPOC) 28ನೇ ಸಮ್ಮೇಳನ
- ಗುಜರಾತ್‌ನಲ್ಲಿ- ಅತ್ಯಂತ ಮಾರಕ ರೋಗಕಾರಕಗಳಿಗಾಗಿ ಭಾರತದ ಮೊದಲ ಸರ್ಕಾರಿ ಅನುದಾನಿತ BSL-4
- ಸಂಶ್ಲೇಷಿತ ಜಾನುವಾರು ತಳಿಗಳು
- 18 ನೇ ಜಪಾನ್-ಭಾರತ ವಿದೇಶಾಂಗ ಸಚಿವರ ಕಾರ್ಯತಂತ್ರದ ಸಂವಾದ
- ವಿಶ್ವಸಂಸ್ಥೆಯ ಮುಕ್ತ ಸಾಗರಗಳ (ಹೈ ಸೀಸ್) ಒಪ್ಪಂದ
- ಬೀಜ ಕಾಯ್ದೆ, 2026 ಮತ್ತು ರೈತರ ಮೇಲೆ ಇದರ ಪ್ರಭಾವ
- ತಿರುವಳ್ಳುವರ್ ದಿನ
- ಜಲ್ಲಿಕಟ್ಟು
- ಚಾಬಹಾರ್ ಬಂದರು
- ಕೇಂದ್ರ ಜಾಗೃತ ಆಯೋಗ
- ಬೇರು ಒಣಗುವ (ಬಾಡುವ) ರೋಗ
- ಕಾಜೀರಂಗದಲ್ಲಿ ಎತ್ತರದ ವನ್ಯಜೀವಿ ಸಂಚಾರ ಮಾರ್ಗ
- ಭಾರತದ ವಿದ್ಯುತ್ ವಲಯ
- ಬ್ರಿಕ್ಸ್ ಪ್ಲಸ್ ನೌಕಾಭ್ಯಾಸ
- ಭಾರತದ ಮೊಟ್ಟಮೊದಲ ಮುಕ್ತ - ಸಮುದ್ರ ಕಡಲ ಮೀನು ಸಾಕಾಣಿಕೆ ಯೋಜನೆ
- ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಗೆ (ECOSOC) 80 ವರ್ಷಗಳು
- ಗ್ರೀನ್‌ಲ್ಯಾಂಡ್ ಮೇಲಿನ ಸುಂಕದ ಬೆದರಿಕೆ: ಐರೋಪ್ಯ ಒಕ್ಕೂಟದ (EU) ವ್ಯಾಪಾರ ಒಪ್ಪಂದಕ್ಕೆ ಅಪಾಯ
- ಹಸಿರು ಅಲ್ಯೂಮಿನಿಯಂ
- ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಸಂಪರ್ಕ ಪಥ (IMEC)
- ಭಾರತದಲ್ಲಿ ಮಕ್ಕಳ ಕಳ್ಳಸಾಗಣೆ
- ಬಾಗುರುಂಬಾ ನೃತ್ಯ
- ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ (RNI)
- ಪರಿಸರ ಸಂರಕ್ಷಣೆ ನಿಧಿ
- ಚಾಗೋಸ್ ದ್ವೀಪಗಳು
- ಮಣಿಪುರ, ಮೇಘಾಲಯ ಮತ್ತು ತ್ರಿಪುರಾ ರಾಜ್ಯೋತ್ಸವ ದಿನ
- ಒಂದು ನಿಲ್ದಾಣ ಒಂದು ಉತ್ಪನ್ನ (OSOP)
- ಐರೋಪ್ಯ ಒಕ್ಕೂಟದ 'ಬಲವಂತ-ವಿರೋಧಿ ಸಾಧನ' EU's Anti-coercion Instrument
- ಸರ್ಫೇಸಿ ಕಾಯ್ದೆ,2002 (SARFAESI Act, 2002)
- ಅಂಟಾರ್ಕ್ಟಿಕ್ ಪೆಂಗ್ವಿನ್‌ಗಳು
- ಗಾಜಾ ಶಾಂತಿ ಮಂಡಳಿ
- ಅಟಲ್ ಪಿಂಚಣಿ ಯೋಜನೆ (APY)
- ಸಿ-295 ವಿಮಾನ
- ಗ್ರಾಕಾ ಮಾಚೆಲ್ ಅವರಿಗೆ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ
- ವೆಸ್ಟ್ ಬ್ಯಾಂಕ್ ಹೊರಠಾಣೆಗೆ 'ಹೊಸ ವಸಾಹತು' ಎಂಬ ಅಧಿಕೃತ ಮಾನ್ಯತೆ

Watch Insta ವಿದ್ಯಮಾನ Video
INSTA KAS
080 69 405 206
www.insightsonindia.com

# INSTA ವಿದ್ಯಮಾನ

## WEEKLY CURRENT AFFAIRS

## JANUARY 3rd Week 2026

### ‘ಸ್ಟಾರ್ಟ್-ಅಪ್ ಇಂಡಿಯಾ’ ಉಪಕ್ರಮಕ್ಕೆ ಒಂದು ದಶಕ

(ಸಾಮಾನ್ಯ ಅಧ್ಯಯನ-3/ಆರ್ಥಿಕತೆ)

**ಇದೀಗ ಸುದ್ದಿಯಲ್ಲಿದೆ:**

- ರಾಷ್ಟ್ರೀಯ ಸ್ಟಾರ್ಟ್-ಅಪ್ (ನವೋದ್ಯಮ) ದಿನವಾದ **ಜನವರಿ 16** ರಂದು, ‘ಸ್ಟಾರ್ಟ್-ಅಪ್ ಇಂಡಿಯಾ’ ಉಪಕ್ರಮವು ಒಂದು ದಶಕವನ್ನು ಪೂರೈಸಿದ ಹಿನ್ನೆಲೆಯಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಭಾಗವಹಿಸಿದರು.

**ಸ್ಟಾರ್ಟ್-ಅಪ್ ಇಂಡಿಯಾ ಉಪಕ್ರಮದ ಬಗ್ಗೆ:**

- ಪ್ರಾರಂಭ:- **ಜನವರಿ 16, 2016.**
- ಉದ್ದೇಶ:- **ಉದ್ಯಮಶೀಲತೆಯನ್ನು ಉತ್ತೇಜಿಸುವುದು** ಮತ್ತು **ಹೂಡಿಕೆ ಆಧಾರಿತ ಬೆಳವಣಿಗೆಯನ್ನು** ಸಾಧ್ಯವಾಗಿಸುವುದು.

**ಭಾರತದ ನವೋದ್ಯಮ (ಸ್ಟಾರ್ಟ್-ಅಪ್) ಪರಿಸರ ವ್ಯವಸ್ಥೆಯ ಬಗ್ಗೆ:**

- **2025ರ ವೇಳೆಗೆ 2 ಲಕ್ಷಕ್ಕೂ ಹೆಚ್ಚು ನವೋದ್ಯಮಗಳನ್ನು ಹೊಂದುವ** ಮೂಲಕ, ಭಾರತವು ವಿಶ್ವದ ಅತಿದೊಡ್ಡ ನವೋದ್ಯಮ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿ ತ್ವರಿತವಾಗಿ ರೂಪುಗೊಂಡಿದೆ.
- ಭಾರತವು ವಿಶ್ವದಲ್ಲೇ **3ನೇ ಅತಿದೊಡ್ಡ ನವೋದ್ಯಮ ಪರಿಸರ ವ್ಯವಸ್ಥೆಯನ್ನು** ಹೊಂದಿದೆ.
- **ಬೆಂಗಳೂರು, ಹೈದರಾಬಾದ್, ಮುಂಬೈ ಮತ್ತು ದೆಹಲಿ-ಎನ್‌ಸಿಆರ್** (ರಾಷ್ಟ್ರ ರಾಜಧಾನಿ ಪ್ರದೇಶ)ನಂತಹ ಪ್ರಮುಖ ಕೇಂದ್ರಗಳು ಈ ಪರಿವರ್ತನೆಯ ಮುಂಚೂಣಿಯಲ್ಲಿವೆ.
- ಭಾರತವು **$350 ಬಿಲಿಯನ್‌ಗೂ** ಅಧಿಕ ಮೌಲ್ಯವನ್ನು ಹೊಂದಿರುವ **120 ಕ್ಕೂ ಹೆಚ್ಚು ಯುನಿಕಾರ್ನ್‌ಗಳನ್ನು** ಹೊಂದಿದೆ.

**ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ (WIPO)ಯ - ಜಾಗತಿಕ ನಾವೀನ್ಯತೆ ಸೂಚ್ಯಂಕ (GII), 2025 ರ ಶ್ರೇಯಾಂಕ:**

- ಇದು ಕಾರ್ಯಕ್ಷಮತೆಯ ಮಾನದಂಡಗಳನ್ನು ಒದಗಿಸುತ್ತದೆ ಮತ್ತು ಸುಮಾರು **140 ಆರ್ಥಿಕತೆಗಳನ್ನು** ಅವುಗಳ **ನಾವೀನ್ಯತೆ ಪರಿಸರ ವ್ಯವಸ್ಥೆಗಳ** ಆಧಾರದ ಮೇಲೆ ಶ್ರೇಣೀಕರಿಸುತ್ತದೆ.
- ಭಾರತವು 2020 ರಲ್ಲಿನ 48 ನೇ ಸ್ಥಾನದಿಂದ 2025 ರಲ್ಲಿ **38 ನೇ ಸ್ಥಾನಕ್ಕೆ ಸ್ಥಿರವಾದ ಏರಿಕೆಯನ್ನು ಕಂಡಿದೆ.**

### 2025: ದಾಖಲೆಯ ಅತ್ಯಂತ ಉಷ್ಣತೆಯ ‘ಲಾ ನಿನಾ’ ವರ್ಷ

(ಸಾಮಾನ್ಯ ಅಧ್ಯಯನ-1/ಭೂಗೋಳಶಾಸ್ತ್ರ/ಸಾಮಾನ್ಯ ಅಧ್ಯಯನ-3/ಪರಿಸರ)

**ಇದೀಗ ಸುದ್ದಿಯಲ್ಲಿದೆ:**

- ಹೊಸ ವರದಿಯೊಂದರ ಪ್ರಕಾರ, 2025 ದಾಖಲಾದ 3 ನೇ ಅತ್ಯಂತ ಉಷ್ಣತೆಯ ವರ್ಷ ಮತ್ತು ಇತಿಹಾಸದಲ್ಲೇ ಅತ್ಯಂತ ಉಷ್ಣತೆಯ ‘ಲಾ ನಿನಾ’ ವರ್ಷವಾಗಿದೆ.

**“ಲಾ ನಿನಾ” ಬಗ್ಗೆ:**

- ಇದೊಂದು **ಪೆಸಿಫಿಕ್ ಮಹಾಸಾಗರದ ಹವಾಮಾನ ಮಾದರಿಯಾಗಿದ್ದು**, ಇದರಲ್ಲಿ **ಬೆಚ್ಚಗಿನ ಸಾಗರದ ನೀರು ಮತ್ತು ಮೋಡಗಳು ಪಶ್ಚಿಮದ ಕಡೆಗೆ** ಸ್ಥಳಾಂತರಗೊಳ್ಳುತ್ತವೆ.
- **ಸಾಮಾನ್ಯಕ್ಕಿಂತ ಭಾರೀ ಮಳೆ:-** ಈ ಪ್ರಕ್ರಿಯೆಯು **ಇಂಡೋನೇಷ್ಯಾ** ಮತ್ತು **ಆಸ್ಟ್ರೇಲಿಯಾ**ದಂತಹ ಪ್ರದೇಶಗಳಲ್ಲಿ ಭಾರೀ ಮಳೆಗೆ ಕಾರಣವಾಗುತ್ತದೆ.
- **ಸಾಮಾನ್ಯಕ್ಕಿಂತ ಹೆಚ್ಚು ಶುಷ್ಕ ಪರಿಸ್ಥಿತಿ:-** ಇದಕ್ಕೆ ವ್ಯತಿರಿಕ್ತವಾಗಿ, **ಅಮೆರಿಕದ ನೈಋತ್ಯ ಭಾಗದ** ಪ್ರದೇಶಗಳು ಈ ಪರಿಸ್ಥಿತಿಗಳನ್ನು ಅನುಭವಿಸುತ್ತವೆ.

**ಭಾರತದ ಮೇಲೆ El-Nino ಮತ್ತು La-Nina ಪ್ರಭಾವಗಳು:**

- ‘ಎಲ್ ನಿನೊ’ ಸಾಮಾನ್ಯವಾಗಿ **ಕಡಿಮೆ ಮಳೆ** ಮತ್ತು **ಹೆಚ್ಚಿನ ತಾಪಮಾನಕ್ಕೆ** ಕಾರಣವಾಗುತ್ತದೆ.
- ‘ಲಾ ನಿನಾ’ **ಹೆಚ್ಚಿನ ಮಳೆ** ಮತ್ತು **ತಂಪಾದ ತಾಪಮಾನವನ್ನು** ತರುತ್ತದೆ.

### ‘ವುಮನಿಯಾ’ (Womaniya) ಉಪಕ್ರಮ

(ಸಾಮಾನ್ಯ ಅಧ್ಯಯನ-1/ಮಹಿಳಾ ಸಬಲೀಕರಣ)

**ಇದೀಗ ಸುದ್ದಿಯಲ್ಲಿದೆ:**

- ಸರ್ಕಾರಿ **ಇ-ಮಾರ್ಕೆಟ್‌ಪ್ಲೇಸ್ (GeM)** ಅಡಿಯಲ್ಲಿ ಜಾರಿಗೊಳಿಸಲಾದ ‘ವುಮನಿಯಾ’ ಉಪಕ್ರಮವು, ತನ್ನ ಅನುಷ್ಠಾನದ 7 ವರ್ಷಗಳನ್ನು ಪೂರೈಸಿದೆ.

'ವುಮೆನಿಯಾ' (Womaniya) ಉಪಕ್ರಮದ ಬಗ್ಗೆ:

- ಪ್ರಾರಂಭ:- 2019
- ಉದ್ದೇಶ:- ಖರೀದಿದಾರರೊಂದಿಗೆ ನೇರ, ಪಾರದರ್ಶಕ ಮತ್ತು ಸಂಪೂರ್ಣ ಡಿಜಿಟಲ್ ಸಂಪರ್ಕವನ್ನು ಕಲ್ಪಿಸುವ ಮೂಲಕ, ಮಧ್ಯವರ್ತಿಗಳನ್ನು ಹಾಗೂ ಪ್ರವೇಶಕ್ಕಿರುವ ಅಡೆತಡೆಗಳನ್ನು ನಿವಾರಿಸಿ, **ಮಹಿಳಾ ಉದ್ಯಮಿ ಮತ್ತು ಸ್ವಸಹಾಯ ಸಂಘಗಳಿಗೆ ಸರ್ಕಾರಿ ಮಾರುಕಟ್ಟೆಗಳಲ್ಲಿ ಪ್ರವೇಶವನ್ನು ಹೆಚ್ಚಿಸುವುದು** ಇದರ ಉದ್ದೇಶವಾಗಿದೆ.
- ಮಹತ್ವ:- **ಸಾರ್ವಜನಿಕ ಸಂಗ್ರಹಣೆಯಲ್ಲಿ ಮಹಿಳೆಯರ ನೇತೃತ್ವದ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಭಾಗವಹಿಸುವಿಕೆಯನ್ನು ಬಲಪಡಿಸುವ** ಗುರಿಯನ್ನು ಇದು ಹೊಂದಿದೆ.

ಸರ್ಕಾರಿ ಇ-ಮಾರ್ಕೆಟ್‌ಪ್ಲೇಸ್ (GeM)ನ ಬಗ್ಗೆ:

- ಸ್ಥಾಪನೆ:- **2016.**
- **ಆನ್‌ಲೈನ್ ಮಾರುಕಟ್ಟೆ ವೇದಿಕೆ:-** ಇದರಲ್ಲಿ **ಸರ್ಕಾರಿ ಸಚಿವಾಲಯಗಳು, ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳು (PSU) ಸರಕು ಮತ್ತು ಸೇವೆಗಳನ್ನು ಖರೀದಿಸಲು** ಅನುಕೂಲವಾಗುತ್ತದೆ.
- ಇದನ್ನು **'ಭಾರತದ ರಾಷ್ಟ್ರೀಯ ಸಂಗ್ರಹಣಾ ಪೋರ್ಟಲ್'** ಎಂತಲೂ ಕರೆಯಲಾಗುತ್ತದೆ.
- ಅಭಿವೃದ್ಧಿಪಡಿಸಿದವರು:- ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ **ರಾಷ್ಟ್ರೀಯ ಇ-ಆಡಳಿತ ವಿಭಾಗದ** ತಾಂತ್ರಿಕ ಬೆಂಬಲದೊಂದಿಗೆ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ **ಸರಬರಾಜು ಮತ್ತು ವಿಲೇವಾರಿ ಮಹಾನಿರ್ದೇಶನಾಲಯ.**
- ಕಾರ್ಯನಿರ್ವಹಣೆ:- ಇದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ **ಸರಬರಾಜು ಮತ್ತು ವಿಲೇವಾರಿ ಮಹಾನಿರ್ದೇಶನಾಲಯ** (DGS&D).
- ಮಹತ್ವ:- GeM ಸಂಪೂರ್ಣವಾಗಿ **ಕಾಗದರಹಿತ, ನಗದುರಹಿತ ಮತ್ತು ವ್ಯವಸ್ಥೆ ಚಾಲಿತ ಇ-ಮಾರುಕಟ್ಟೆಯಾಗಿದ್ದು,** ಇದು **ಕನಿಷ್ಠ ಮಾನವ ಹಸ್ತಕ್ಷೇಪದೊಂದಿಗೆ ಸಾಮಾನ್ಯ ಬಳಕೆಯ ಸರಕು ಮತ್ತು ಸೇವೆಗಳ ಖರೀದಿಯನ್ನು** ಸಾಧ್ಯವಾಗಿಸುತ್ತದೆ.

## ಬುಡಕಟ್ಟು ವೈದ್ಯರಿಗಾಗಿ ಭಾರತದ ಮೊದಲ ರಾಷ್ಟ್ರೀಯ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ

(ಸಾಮಾನ್ಯ ಅಧ್ಯಯನ - 2/ಆಡಳಿತ)

ಇದೀಗ ಸುದ್ದಿಯಲ್ಲಿದೆ:

- ಬುಡಕಟ್ಟು ಪ್ರದೇಶಗಳಲ್ಲಿ ಆರೋಗ್ಯ ಸೇವೆಯ ವ್ಯಾಪ್ತಿಯನ್ನು ಬಲಪಡಿಸುವ ಉದ್ದೇಶದಿಂದ, **ಬುಡಕಟ್ಟು ವ್ಯವಹಾರಗಳ ಸಚಿವಾಲಯವು (MoTA)** 'ಬುಡಕಟ್ಟು ವೈದ್ಯರಿಗಾಗಿ ಭಾರತದ ಮೊದಲ ರಾಷ್ಟ್ರೀಯ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ'ವನ್ನು ಆಯೋಜಿಸುತ್ತಿದೆ.

'ಬುಡಕಟ್ಟು ವೈದ್ಯರಿಗಾಗಿ ಭಾರತದ ಮೊದಲ ರಾಷ್ಟ್ರೀಯ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ'ದ ಬಗ್ಗೆ:

- **ಸಮುದಾಯ ಮಟ್ಟದ ವಿಶ್ವಾಸಾರ್ಹ ಪಾಲುದಾರ:- ಬುಡಕಟ್ಟು ಮತ್ತು ಸ್ಥಳೀಯ ವೈದ್ಯರನ್ನು** ಭಾರತದ ಸಾರ್ವಜನಿಕ ಆರೋಗ್ಯ ಪರಿಸರ ವ್ಯವಸ್ಥೆಯೊಳಗೆ, ಸಮುದಾಯ ಮಟ್ಟದ ವಿಶ್ವಾಸಾರ್ಹ ಪಾಲುದಾರರನ್ನಾಗಿ ಗುರುತಿಸುವುದು ಮತ್ತು ಅವರನ್ನು ಮುಖ್ಯವಾಹಿನಿಯೊಂದಿಗೆ ಸಂಯೋಜಿಸುವುದು ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ.
- ಈ ವೈದ್ಯರು **ಆಳವಾದ ಜನಾಂಗೀಯ-ಔಷಧೀಯ ಜ್ಞಾನವನ್ನು** ಹೊಂದಿರುತ್ತಾರೆ. ಇವರು ಸಮುದಾಯದ ಜನರಿಗೆ **ಸುಲಭವಾಗಿ ಲಭ್ಯವಿರುತ್ತಾರೆ** ಮತ್ತು ಆರೋಗ್ಯ ಸೇವೆಗಳಿಗಾಗಿ ಜನರು ಆಶ್ರಯಿಸುವ **'ಮೊದಲ ಸಂಪರ್ಕ ಬಿಂದುಗಳಾಗಿ'** ಕಾರ್ಯನಿರ್ವಹಿಸುತ್ತಾರೆ..
- ಅನುಷ್ಠಾನ:- **"ಪ್ರಾಜೆಕ್ಟ್ ದೃಷ್ಟಿ" (DRISTI)ಯ** ಅಡಿಯಲ್ಲಿ ಭಾರತದ ಮೊದಲ ರಾಷ್ಟ್ರೀಯ ಬುಡಕಟ್ಟು ಆರೋಗ್ಯ ವೀಕ್ಷಣಾಲಯವಾದ, **'ಭಾರತ್ ಬುಡಕಟ್ಟು ಆರೋಗ್ಯ ವೀಕ್ಷಣಾಲಯ'** (B-THO)ವನ್ನು ಸ್ಥಾಪಿಸುವ ಸಲುವಾಗಿ, **ICMR - ಪ್ರಾದೇಶಿಕ ವೈದ್ಯಕೀಯ ಸಂಶೋಧನಾ ಕೇಂದ್ರ ಮತ್ತು ಬುಡಕಟ್ಟು ವ್ಯವಹಾರಗಳ ಸಚಿವಾಲಯದ** (MoTA) ನಡುವೆ ತಿಳುವಳಿಕಾ ಒಡಂಬಡಿಕೆಗೆ (MoU) ಸಹಿ ಹಾಕಲಾಗುವುದು.

## ಕಾಮನ್‌ವೆಲ್ತ್ ರಾಷ್ಟ್ರಗಳ ಸಭಾಧ್ಯಕ್ಷರ ಮತ್ತು ಪೀಠಾಸೀನ ಅಧಿಕಾರಿಗಳ (CSPOC) 28ನೇ ಸಮ್ಮೇಳನ

(ಸಾಮಾನ್ಯ ಅಧ್ಯಯನ - 2/ಆಡಳಿತ)

ಇದೀಗ ಸುದ್ದಿಯಲ್ಲಿದೆ:

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು **'ಸಂವಿಧಾನ ಸದನ'ದಲ್ಲಿ** ಆಯೋಜಿಸಲಾಗಿದ್ದ "CSPOC- ಕಾಮನ್‌ವೆಲ್ತ್ ರಾಷ್ಟ್ರಗಳ ಸಭಾಧ್ಯಕ್ಷರ (Speakers) ಮತ್ತು ಪೀಠಾಸೀನ ಅಧಿಕಾರಿಗಳ (Presiding Officers) 28ನೇ ಸಮ್ಮೇಳನ"ವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭಾರತವು ತನ್ನ **ವೈವಿಧ್ಯತೆಯನ್ನು ಹೇಗೆ ಪ್ರಜಾಸತ್ತಾತ್ಮಕ**

**ಶಕ್ತಿಯನ್ನಾಗಿ** ಪರಿವರ್ತಿಸಿಕೊಂಡಿದೆ ಎಂಬುದನ್ನು ಎತ್ತಿ ತೋರಿಸಿದರು.

**ಈ 28ನೇ ಸಮ್ಮೇಳನದ ಬಗ್ಗೆ:**

- ಈ ಸಮ್ಮೇಳನದಲ್ಲಿ **42 ಕಾಮನ್‌ವೆಲ್ತ್ ರಾಷ್ಟ್ರಗಳನ್ನು ಪ್ರತಿನಿಧಿಸುವ 61 ಸಭಾಧ್ಯಕ್ಷರು ಮತ್ತು ಪೀಠಾಸೀನ ಅಧಿಕಾರಿಗಳು** ಭಾಗವಹಿಸಿದ್ದರು.
- ಉದ್ದೇಶ:- **ಸಂಸದೀಯ ಪ್ರಜಾಪ್ರಭುತ್ವದ** ವಿವಿಧ ಸ್ವರೂಪಗಳ ಕುರಿತು ಜ್ಞಾನ ಮತ್ತು ತಿಳುವಳಿಕೆಯನ್ನು ಉತ್ತೇಜಿಸುವುದು ಹಾಗೂ **ಸಂಸದೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು.**
- ಅಧ್ಯಕ್ಷತೆ:- ಲೋಕಸಭೆಯ ಸಭಾಧ್ಯಕ್ಷರಾದ **'ಓಂ ಬಿರ್ಲಾ'** ಅವರು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

**ಕಾಮನ್‌ವೆಲ್ತ್ ರಾಷ್ಟ್ರಗಳ ಬಗ್ಗೆ:**

- ಸದಸ್ಯ ರಾಷ್ಟ್ರಗಳು:- **56 ಸ್ವತಂತ್ರ ಸದಸ್ಯ ರಾಷ್ಟ್ರಗಳ ಸ್ವಯಂಪ್ರೇರಿತ ಒಕ್ಕೂಟವಾಗಿದೆ.**
- ಈ ಸದಸ್ಯ ರಾಷ್ಟ್ರಗಳನ್ನು **5 ಪ್ರದೇಶವಾರು ಸದಸ್ಯ ರಾಷ್ಟ್ರಗಳಾಗಿ ವಿಂಗಡಿಸಲಾಗಿದೆ.** ಅವುಗಳೆಂದರೆ,
  1. ಆಫ್ರಿಕಾ (21), ಏಷ್ಯಾ (8), ಕೆರಿಬಿಯನ್ ಮತ್ತು ಅಮೆರಿಕ (13), ಯುರೋಪ್ (3), ಮತ್ತು ಪೆಸಿಫಿಕ್ (11).
  2. ಈ ದೇಶಗಳು ಒಟ್ಟಾಗಿ ಸುಮಾರು **2.7 ಬಿಲಿಯನ್ ಜನಸಂಖ್ಯೆಯನ್ನು** ಪ್ರತಿನಿಧಿಸುತ್ತವೆ ಮತ್ತು ಇದು ವಿಶ್ವದ ಒಟ್ಟು ಜನಸಂಖ್ಯೆಯ ಸುಮಾರು **ಮೂರನೇ ಒಂದರಷ್ಟು** ಭಾಗವಾಗಿದೆ.
- **ಯಾವುದೇ ರಾಷ್ಟ್ರ ಸೇರ್ಪಡೆಯಾಗಲಬಹುದು:-** ಇಲ್ಲಿನ **ಬಹುಪಾಲು ಸದಸ್ಯ ರಾಷ್ಟ್ರಗಳು ಬ್ರಿಟಿಷ್ ಸಾಮ್ರಾಜ್ಯದ ಹಿಂದಿನ ಪ್ರಾಂತ್ಯಗಳಾಗಿದ್ದರೂ, ಒಕ್ಕೂಟದ ಮೌಲ್ಯಗಳಿಗೆ ಬದ್ಧವಾಗಿರುವ** ಯಾವುದೇ ರಾಷ್ಟ್ರವು ಇದಕ್ಕೆ ಸೇರ್ಪಡೆಯಾಗಲು ಅರ್ಜಿ ಸಲ್ಲಿಸಬಹುದಾಗಿದೆ.

**ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಮುಖ ಸಂಗತಿಗಳು ಮತ್ತು ಆಡಳಿತ:**

- ಕಾಮನ್‌ವೆಲ್ತ್ ಮುಖ್ಯಸ್ಥರು:- **ಕಿಂಗ್ ಚಾರ್ಲ್ಸ್ III** ಅವರು ಈ ಒಕ್ಕೂಟದ ಸಾಂಕೇತಿಕ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಾರೆ.
- ಮಹಾಕಾರ್ಯದರ್ಶಿ:- **ಶಿರ್ಲಿ ಅಯೋರ್ಕರ್ ಬೋಚ್ವೆ**
- ಬ್ರಿಟಿಷ್ ಇತಿಹಾಸ ಹೊಂದಿರದ ರಾಷ್ಟ್ರಗಳು:- **ಮೊಜಾಂಬಿಕ್, ರುವಾಂಡಾ, ಗ್ಯಾಬನ್ ಮತ್ತು ಟೋಗೊ** ರಾಷ್ಟ್ರಗಳು, ಯುನೈಟೆಡ್ ಕಿಂಗ್‌ಡಮ್‌ನೊಂದಿಗೆ ಯಾವುದೇ ಐತಿಹಾಸಿಕ ಸಂಪರ್ಕವನ್ನು ಹೊಂದಿರದಿದ್ದರೂ ಒಕ್ಕೂಟಕ್ಕೆ ಸೇರ್ಪಡೆಗೊಂಡಿವೆ.
- ಅತಿದೊಡ್ಡ ಮತ್ತು ಚಿಕ್ಕ ರಾಷ್ಟ್ರಗಳು:- **ಭಾರತವು** ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸದಸ್ಯ ರಾಷ್ಟ್ರವಾಗಿದ್ದರೆ, **ನೌರು ಮತ್ತು ತುವಾಲು** ಅತ್ಯಂತ ಚಿಕ್ಕ ರಾಷ್ಟ್ರಗಳಾಗಿವೆ.
- ಕಾಮನ್‌ವೆಲ್ತ್ ಸರ್ಕಾರದ ಮುಖ್ಯಸ್ಥರ ಸಭೆ (CHOGM):- ಪ್ರತಿ **ಎರಡು ವರ್ಷಗಳಿಗೊಮ್ಮೆ** ನಡೆಯುತ್ತದೆ. ಮುಂದಿನ ಸಭೆಯು 2026 ರ ಅಂತ್ಯದಲ್ಲಿ **ಆಂಟಿಗುವಾ ಮತ್ತು ಬಾರ್ಬುಡಾದಲ್ಲಿ** ನಡೆಯಲಿದೆ.

## ಗುಜರಾತ್‌ನಲ್ಲಿ- ಅತ್ಯಂತ ಮಾರಕ ರೋಗಕಾರಕಗಳಿಗಾಗಿ ಭಾರತದ ಮೊದಲ ಸರ್ಕಾರಿ ಅನುದಾನಿತ BSL-4 ಪ್ರಯೋಗಾಲಯ

(ಸಾಮಾನ್ಯ ಅಧ್ಯಯನ - 2/ಆರೋಗ್ಯ;ಸಾಮಾನ್ಯ ಅಧ್ಯಯನ - 3/ವಿಜ್ಞಾನ ಮತ್ತು ತಂತ್ರಜ್ಞಾನ)

**ಇದೀಗ ಸುದ್ದಿಯಲ್ಲಿದೆ:**

- ಕೇಂದ್ರ ಗೃಹ ಸಚಿವರು **ಗಾಂಧಿನಗರದಲ್ಲಿ 'ಜೈವಿಕ ಸುರಕ್ಷತಾ ಹಂತ-4' (BSL-4) ನಿಯಂತ್ರಣ ಸೌಲಭ್ಯ ಮತ್ತು ಪ್ರಯೋಗಾಲಯಕ್ಕೆ** ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಅವರು, ಇದನ್ನು ಭಾರತದ **"ಆರೋಗ್ಯ ಕವಚ"** ಎಂದು ಬಣ್ಣಿಸಿದರು.

**ಜೈವಿಕ ಸುರಕ್ಷತಾ ಹಂತ-4 (BSL-4) ಪ್ರಯೋಗಾಲಯ ಸೌಲಭ್ಯದ ಬಗ್ಗೆ:**

- ಇವುಗಳು **ಜೈವಿಕ ನಿಯಂತ್ರಣದ ಅತ್ಯುನ್ನತ ಗುಣಮಟ್ಟವನ್ನು** ಪ್ರತಿನಿಧಿಸುತ್ತವೆ.
- **ಲಸಿಕೆಗಳು ಅಥವಾ ಚಿಕಿತ್ಸೆಗಳು ಲಭ್ಯವಿಲ್ಲದ, ವಿಶ್ವದ ಅತ್ಯಂತ ಅಪಾಯಕಾರಿ ಮತ್ತು ಹೆಚ್ಚು ಸಾಂಕ್ರಾಮಿಕ ರೋಗಕಾರಕಗಳನ್ನು ಸುರಕ್ಷಿತವಾಗಿ ಅಧ್ಯಯನ** ಮಾಡಲು ಇದನ್ನು ವಿನ್ಯಾಸಗೊಳಿಸಲಾಗಿದೆ.
- ವಿಜ್ಞಾನಿಗಳು ಇಲ್ಲಿ **ಸುಧಾರಿತ ಸಂಶೋಧನೆಯನ್ನು ನಡೆಸುತ್ತಾರೆ; ರೋಗನಿರ್ಣಯ ವಿಧಾನಗಳು, ಲಸಿಕೆಗಳು ಮತ್ತು ಚಿಕಿತ್ಸಾ ವಿಧಾನಗಳನ್ನು** ಅಭಿವೃದ್ಧಿಪಡಿಸುತ್ತಾರೆ. ಅಲ್ಲದೆ, ಕಟ್ಟುನಿಟ್ಟಾದ ನಿಯಂತ್ರಿತ ಮತ್ತು ಅಂತಾರಾಷ್ಟ್ರೀಯ ನಿಗಾ ವ್ಯವಸ್ಥೆಯ ಅಡಿಯಲ್ಲಿ, **ರೋಗ ಉಲ್ಬಣದ ತನಿಖೆ ಮತ್ತು ತ್ವರಿತ ಪ್ರತಿಕ್ರಿಯೆ ಕಾರ್ಯಗಳನ್ನು** ಇಲ್ಲಿ ಕೈಗೊಳ್ಳಲಾಗುತ್ತದೆ.
- ಮಹತ್ವ:- ಗಾಂಧಿನಗರದಲ್ಲಿ ನಿರ್ಮಾಣವಾಗಲಿರುವ BSL-4 ಪ್ರಯೋಗಾಲಯವು, **'ಪ್ರಾಣಿಗಳ ಜೈವಿಕ ಸುರಕ್ಷತಾ ಹಂತ'ದ ಸೌಲಭ್ಯದೊಂದಿಗೆ,** ಕಾರ್ಯತಂತ್ರದ ರಾಷ್ಟ್ರೀಯ ಆಸ್ತಿಯಾಗಲಿದೆ. ಇಲ್ಲಿ **ಎಬೋಲಾ ವೈರಸ್, ಮಾರ್ಬರ್ಗ್ ವೈರಸ್, ಕ್ರಿಮಿಯನ್-ಕಾಂಗೋ ಹೆಮರಾಜಿಕ್ ಜ್ವರ (CCHF)**

ವೈರಸ್, ಕ್ಯಾಸನೂರು ಅರಣ್ಯ ಕಾಯಿಲೆ ವೈರಸ್ **(KFD)** ಮತ್ತು ನಿಫಾ ವೈರಸ್ ಸೇರಿದಂತೆ ಮಾನವಕುಲಕ್ಕೆ ತಿಳಿದಿರುವ ಅತ್ಯಂತ ಮಾರಕ ರೋಗಕಾರಕಗಳ ಮೇಲೆ ಸಂಶೋಧನೆ ನಡೆಸಲಾಗುತ್ತದೆ.

## ಸಂಶ್ಲೇಷಿತ ಜಾನುವಾರು ತಳಿಗಳು

(ಸಾಮಾನ್ಯ ಅಧ್ಯಯನ - 3/ಹೈನುಗಾರಿಕೆ ವಲಯ)



**ಇದೀಗ ಸುದ್ದಿಯಲ್ಲಿದೆ:**

- **ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ** (NDRI)ಯು ಅಭಿವೃದ್ಧಿಪಡಿಸಿರುವ, **'ಕರಣ್ ಫ್ರೈಸ್'** ಮತ್ತು **'ವೃಂದಾವನಿ'** ಎಂಬ ಎರಡು ಹೊಸ ಸಂಶ್ಲೇಷಿತ ಜಾನುವಾರು ತಳಿಗಳನ್ನು ಭಾರತವು ನೋಂದಾಯಿಸಿದೆ.

**'ಸಂಶ್ಲೇಷಿತ ಜಾನುವಾರು ತಳಿ' ಎಂದರೇನು?**

- ಸಾಮಾನ್ಯವಾಗಿ **ದೇಶೀಯ (ಬಾಸ್ ಇಂಡಿಕಸ್)** ಮತ್ತು **ವಿದೇಶಿಯ (ಬಾಸ್ ಟಾರಸ್)** ತಳಿಗಳಂತಹ, **ಎರಡು ಅಥವಾ ಹೆಚ್ಚಿನ ತಳಿಗಳ ನಡುವಿನ 'ಯೋಜಿತ ಮಿಶ್ರತಳಿ ಸಂತಾನೋತ್ಪತ್ತಿ'**ಯ ಮೂಲಕ ಅಭಿವೃದ್ಧಿಪಡಿಸಿ, ನಂತರದ ಪೀಳಿಗೆಗಳಲ್ಲಿ **ಅಪೇಕ್ಷಿತ ಗುಣಲಕ್ಷಣಗಳನ್ನು ಸ್ಥಿರೀಕರಿಸಲಾದ ತಳಿ.**
- **ವಿಶಿಷ್ಟ ತಳಿಗಳು:-** ಒಮ್ಮೆ ಈ ಗುಣಲಕ್ಷಣಗಳು ಸ್ಥಿರಗೊಂಡ ನಂತರ, ಇವು **ಶುದ್ಧ ತಳಿಗಳಂತೆ ಸಂತಾನೋತ್ಪತ್ತಿಯನ್ನು ನಡೆಸುತ್ತವೆ** ಮತ್ತು ಇವುಗಳನ್ನು ವಿಶಿಷ್ಟ ತಳಿಗಳೆಂದು ಗುರುತಿಸಲಾಗುತ್ತದೆ.

**'ಕರಣ್ ಫ್ರೈಸ್' ಜಾನುವಾರು ತಳಿಯ ಬಗ್ಗೆ:**

- **"ಹೋಲ್ಸ್ಟೀನ್ ಫ್ರೈಸಿಯನ್" ಮತ್ತು "ಥಾರ್‌ಪಾರ್ಕರ್ ಝೆಬು" ಜಾನುವಾರುಗಳ ನಡುವಿನ ಮಿಶ್ರತಳಿ:-** ಜಾಗತಿಕವಾಗಿ ಗುರುತಿಸಲ್ಪಟ್ಟ **ಅಧಿಕ ಇಳುವರಿ ನೀಡುವ ತಳಿಯಾದ** 'ಹೋಲ್ಸ್ಟೀನ್ ಫ್ರೈಸಿಯನ್' (Holstein Friesian) ಮತ್ತು ಕಠಿಣ ಪರಿಸ್ಥಿತಿಗಳನ್ನು ತಡೆದುಕೊಳ್ಳುವ ಹಾಗೂ **ರೋಗ ನಿರೋಧಕ ಶಕ್ತಿಗೆ ಹೆಸರುವಾಸಿಯಾದ ಭಾರತದ** ದೇಶೀಯ 'ಥಾರ್‌ಪಾರ್ಕರ್ ಝೆಬು' ಜಾನುವಾರುಗಳ ನಡುವಿನ ಮಿಶ್ರತಳಿ ಸಂತಾನೋತ್ಪತ್ತಿ ಮೂಲಕ ಈ ಸಂಶ್ಲೇಷಿತ ಹಸುವಿನ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ.
- ವಿಶೇಷತೆ:- **ಅಧಿಕ ಉತ್ಪಾದಕತೆ ಮತ್ತು ಹವಾಮಾನ ವೈಪರೀತ್ಯಗಳನ್ನು ತಡೆದುಕೊಳ್ಳುವ** ಸಾಮರ್ಥ್ಯದ ಸಂಯೋಜನೆಯನ್ನು ಹೊಂದಿದ್ದು, ಇದು ದಿನಕ್ಕೆ ಗರಿಷ್ಠ **46.5 ಕೆ.ಜಿ.ಯಷ್ಟು ಹಾಲಿನ ಇಳುವರಿಯನ್ನು** ನೀಡುತ್ತದೆ.

**ಮಹತ್ವ:**

- ದೇಶೀಯ ಜಾನುವಾರುಗಳಿಗಿಂತ ಇವು **ಹೆಚ್ಚಿನ ಉತ್ಪಾದಕತೆಯನ್ನು** ಹೊಂದಿವೆ.
- ಶುದ್ಧ ವಿದೇಶಿ ತಳಿಗಳಿಗಿಂತ **ಉತ್ತಮ ಹವಾಮಾನ ಸ್ಥಿತಿಸ್ಥಾಪಕತ್ವವನ್ನು** ಇವು ಪ್ರದರ್ಶಿಸುತ್ತವೆ.
- ಹೈನುಗಾರರಿಗೆ **ಉತ್ತಮ ಆರ್ಥಿಕ ಆದಾಯವನ್ನು** ಇವು ಒದಗಿಸುತ್ತವೆ.
- ಇವುಗಳಲ್ಲಿ **ಕಡಿಮೆ ಮರಣ ಪ್ರಮಾಣ** ಮತ್ತು **ಉತ್ತಮ ಸಂತಾನೋತ್ಪತ್ತಿ ದಕ್ಷತೆಯು** ಕಂಡುಬರುತ್ತದೆ.

## 18 ನೇ ಜಪಾನ್-ಭಾರತ ವಿದೇಶಾಂಗ ಸಚಿವರ ಕಾರ್ಯತಂತ್ರದ ಸಂವಾದ

(ಸಾಮಾನ್ಯ ಅಧ್ಯಯನ - 2/ಅಂತರರಾಷ್ಟ್ರೀಯ ಸಂಬಂಧಗಳು)

**ಇದೀಗ ಸುದ್ದಿಯಲ್ಲಿದೆ:**

- 18 ನೇ ಭಾರತ-ಜಪಾನ್ ಕಾರ್ಯತಂತ್ರದ ಸಂವಾದದಲ್ಲಿ, ಈ ಎರಡು ದೇಶಗಳು ತಮ್ಮ **'ವಿಶೇಷ ಕಾರ್ಯತಂತ್ರದ ಮತ್ತು ಜಾಗತಿಕ ಪಾಲುದಾರಿಕೆ'**ಯ ಬೆಳವಣಿಗೆಯನ್ನು ಪುನರುಚ್ಚರಿಸಿದವು.

**ಪ್ರಮುಖ ಮುಖ್ಯಾಂಶಗಳು:**

- **ಆರ್ಥಿಕ ಭದ್ರತೆಯ ಕುರಿತಾದ ಖಾಸಗಿ ವಲಯದ ಸಂವಾದ (B2B):-** 2026 ರ ಆರಂಭದಲ್ಲಿ ಈ ಎರಡು ದೇಶಗಳು ಇದಕ್ಕೇ ಚಾಲನೆಯನ್ನು ಘೋಷಿಸಿದವು.
- ಈ ಸಂವಾದವು 5 ಆದ್ಯತಾ ಕ್ಷೇತ್ರಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಅವುಗಳೆಂದರೆ,
  1. **ಅರೆವಾಹಕಗಳು (ಸೆಮಿಕಂಡಕ್ಟರ್‌ಗಳು),**
  2. **ನಿರ್ಣಾಯಕ ಖನಿಜಗಳು,**
  3. **ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ICT),**

4. ಶುದ್ಧ ಇಂಧನ
5. ಔಷಧ ಉದ್ಯಮ (ಫಾರ್ಮಾಸ್ಯುಟಿಕಲ್ಸ್)


- **ಜಪಾನ್-ಭಾರತ ಎಐ ಕಾರ್ಯತಂತ್ರದ ಸಂವಾದ:-** **'ಜಪಾನ್-ಭಾರತ ಎಐ ಸಹಕಾರ ಉಪಕ್ರಮ'ದ** (JAI) ಅಡಿಯಲ್ಲಿ ಈ ಸಂವಾದ'ವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.
- **ಜಂಟಿ ಸಂಶೋಧನೆ:-** ಇದಕ್ಕಾಗಿ **ಜಪಾನ್ 2030 ರ ವೇಳೆಗೆ 500 ಅತ್ಯಂತ ಕೌಶಲ್ಯಯುತ ಭಾರತೀಯ ಎಐ ವೃತ್ತಿಪರರನ್ನು ಆಹ್ವಾನಿಸಲಿದೆ.**

### ಭಾರತ ಮತ್ತು ಜಪಾನ್ ಸಂಬಂಧಗಳು:

- **ರಕ್ಷಣೆ ಮತ್ತು ಭದ್ರತೆ:-**
  - ಸೇನಾ ಸಮರಾಭ್ಯಾಸಗಳು:- **'ಮಲಬಾರ್', 'ಧರ್ಮ ಗಾರ್ಡಿಯನ್' ಮತ್ತು 'ಜಿಮೆಕ್ಸ್'** ನಂತಹ ಸಮರಾಭ್ಯಾಸಗಳು ಉಭಯ ದೇಶಗಳ ನಡುವಿನ ಪರಸ್ಪರ ಕಾರ್ಯಸಾಧ್ಯತೆ ಮತ್ತು ಇಂಡೋ-ಪೆಸಿಫಿಕ್ ವಲಯದ ಭದ್ರತೆಯನ್ನು ಹೆಚ್ಚಿಸುತ್ತವೆ.
- **ವ್ಯಾಪಾರ:-** 2023-24 ರ ಅವಧಿಯಲ್ಲಿ ದ್ವಿಪಕ್ಷೀಯ ವ್ಯಾಪಾರವು ಸುಮಾರು **$23 ಬಿಲಿಯನ್** ಮೌಲ್ಯವನ್ನು ತಲುಪಿದೆ.
- **ಭಾರತದ 5ನೇ ಅತಿದೊಡ್ಡ ವಿದೇಶಿ ನೇರ ಹೂಡಿಕೆ (FDI) ಮೂಲ:-** ಜಪಾನ್, **ಭಾರತದ 5ನೇ ಅತಿದೊಡ್ಡ** ವಿದೇಶಿ ನೇರ ಹೂಡಿಕೆ (FDI) ಮೂಲವಾಗಿದೆ.
- **ಬುಲೆಟ್ ರೈಲು:-** **ಮುಂಬೈ-ಅಹಮದಾಬಾದ** ನಡುವಿನ ಅತಿ ವೇಗದ ಬುಲೆಟ್ ರೈಲು ಯೋಜನೆಯು ಭಾರತ ಮತ್ತು ಜಪಾನ್ ನಡುವಿನ ಸಾರಿಗೆ ಸಹಕಾರಕ್ಕೆ ಒಂದು ಪ್ರಮುಖ ಉದಾಹರಣೆಯಾಗಿದೆ.
- **ಶುದ್ಧ ಇಂಧನ ಪಾಲುದಾರಿಕೆ, 2022):-** **ಜಲಜನಕ, ನವೀಕರಿಸಬಹುದಾದ ಇಂಧನಗಳು ಮತ್ತು ಹವಾಮಾನ ಸಹಕಾರ** ಕ್ಷೇತ್ರಗಳನ್ನು ವಿಸ್ತರಿಸುತ್ತದೆ.
- **ಕ್ವಾಡ್:-** 'ಕ್ವಾಡ್' ಸಮನ್ವಯವು **ಸಾಮೂಹಿಕ ಕಡಲ(ಸಾಗರ) ಬದ್ಧತೆಗಳ ಮೂಲಕ ಇಂಡೋ-ಪೆಸಿಫಿಕ್ ವಲಯದಲ್ಲಿ** ಸ್ಥಿರತೆಯನ್ನು ಖಾತ್ರಿಗೊಳಿಸುತ್ತದೆ.
- **ಪೂರೈಕೆ ಸರಪಳಿ ಸ್ಥಿತಿಸ್ಥಾಪಕತ್ವ ಉಪಕ್ರಮ (SCRI):-** ಇದು **ನಿರ್ಣಾಯಕ ಸರಕುಗಳ ಪೂರೈಕೆಗಾಗಿ ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ** ಮಾಡುತ್ತದೆ.
- **ವೇದಿಕೆಗಳು:-** ಭಾರತ ಮತ್ತು ಜಪಾನ್ ರಾಷ್ಟ್ರಗಳು **ಜಿ-20, ಅಂತಾರಾಷ್ಟ್ರೀಯ ಸೌರ ಒಕ್ಕೂಟ, CDRI ಮತ್ತು IPEF** ಗಳಲ್ಲಿ ಸಹಕರಿಸುತ್ತಿದ್ದು, ಇದು ಬಹುಪಕ್ಷೀಯ ಆಡಳಿತವನ್ನು ಬಲಪಡಿಸುತ್ತದೆ.
- **ಬಾಹ್ಯಾಕಾಶ:-** **ಇಸ್ರೋ ಮತ್ತು ಜಾಕ್ಸಾ (JAXA) ದ 'ಲುಪೆಕ್ಸ್' ಮಿಷನ್,** ಬಾಹ್ಯಾಕಾಶ ಪರಿಶೋಧನಾ ಕ್ಷೇತ್ರದಲ್ಲಿನ ಅತ್ಯಾಧುನಿಕ ಸಹಯೋಗಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

## ವಿಶ್ವಸಂಸ್ಥೆಯ ಮುಕ್ತ ಸಾಗರಗಳ (ಹೈ ಸೀಸ್) ಒಪ್ಪಂದ

(ಸಾಮಾನ್ಯ ಅಧ್ಯಯನ - 3/ಪರಿಸರ)




### ಇದೀಗ ಸುದ್ದಿಯಲ್ಲಿದೆ:

- ವಿಶ್ವಸಂಸ್ಥೆ ಬೆಂಬಲಿತ **ಅಂತರರಾಷ್ಟ್ರೀಯ ಜಲಪ್ರದೇಶಗಳ ಜೀವವೈವಿಧ್ಯ ಕುರಿತು ಒಪ್ಪಂದ** ಜಾರಿಗೆ ಬಂದಿದೆ. ಇದನ್ನು ಅಧಿಕೃತವಾಗಿ **'ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯ ಆಚೆಗಿನ ಜೀವವೈವಿಧ್ಯ (BBNJ) ಒಪ್ಪಂದ'** ಎಂದು ಕರೆಯಲಾಗುತ್ತದೆ.
- ಈ ಒಪ್ಪಂದವು **ಮುಕ್ತ ಸಾಗರಗಳನ್ನು ಸಂರಕ್ಷಿಸಲು ಮತ್ತು ಸುಸ್ಥಿರವಾಗಿ ಬಳಸಲು, ವಿಶ್ವದ ಮೊದಲ ಕಾನೂನುಬದ್ಧ ಜಾಗತಿಕ ಚೌಕಟ್ಟನ್ನು** ಸೃಷ್ಟಿಸಿದೆ.

### ಮುಕ್ತ ಸಾಗರಗಳು (High Seas) ಎಂದರೇನು?

- 'ಮುಕ್ತ ಸಾಗರಗಳು' ಎಂದರೆ **ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯ ಆಚೆಗಿನ, ಅಂದರೆ 200 ನಾಟಿಕಲ್ ಮೈಲಿಗಳಾಚೆಗಿನ (ವಿಶೇಷ ಆರ್ಥಿಕ ವಲಯಗಳು - EEZs) ಸಾಗರ ಪ್ರದೇಶಗಳಾಗಿವೆ.**
- ಇವು ಜಾಗತಿಕ ಸಾಗರದ ಸುಮಾರು **ಮೂರನೇ ಎರಡರಷ್ಟು ಭಾಗವನ್ನು** ಮತ್ತು **ಭೂ ಮೇಲ್ಮೈಯ ಅರ್ಧದಷ್ಟು ಭಾಗವನ್ನು** ಆವರಿಸಿಕೊಂಡಿವೆ.
- ಈ ಹಿಂದೆ, ಇವುಗಳ ನಿರ್ವಹಣೆಯು ಮುಖ್ಯವಾಗಿ **UNCLOS ಅಡಿಯಲ್ಲಿನ ಸಾಮಾನ್ಯ ತತ್ವಗಳನ್ನು** ಆಧರಿಸಿತ್ತು. ಹೀಗಾಗಿ, ಇಲ್ಲಿ 'ಜೀವವೈವಿಧ್ಯ-ನಿರ್ದಿಷ್ಟ ನಿಯಂತ್ರಣ'ವು ಸೀಮಿತವಾಗಿತ್ತು.

**ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯ ಆಚೆಗಿನ ಜೀವವೈವಿಧ್ಯ (BBNJ) ಒಪ್ಪಂದದ ಬಗ್ಗೆ:**

- **ಅಂಗೀಕಾರ ಮತ್ತು ಹಿನ್ನೆಲೆ:-** ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆದ, **'ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯ ಆಚೆಗಿನ ಪ್ರದೇಶಗಳ ಸಾಗರ ಜೀವವೈವಿಧ್ಯದ ಕುರಿತಾದ ಅಂತರ-ಸರ್ಕಾರಿ ಸಮ್ಮೇಳನ'**ದ ಮುಖಾಂತರ **2023** ರಲ್ಲಿ ಈ ಒಪ್ಪಂದವನ್ನು ಅಂಗೀಕರಿಸಲಾಯಿತು.
- **UNCLOS ಅಡಿಯಲ್ಲಿನ ಒಂದು ಒಪ್ಪಂದ:-** ಇದು **ಸಮುದ್ರಗಳ (ಕಡಲ) ಕಾನೂನಿನ ಮೇಲಿನ ವಿಶ್ವಸಂಸ್ಥೆಯ ಸಮಾವೇಶ'**ದ (UNCLOS) ಅಡಿಯಲ್ಲಿನ ಒಂದು ಒಪ್ಪಂದವಾಗಿದೆ.
- **ಸಾಗರ ಜೀವವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ:-** ಇದನ್ನು ಸಾಮಾನ್ಯವಾಗಿ **'ಮುಕ್ತ ಸಾಗರಗಳು'** ಎಂದು ಕರೆಯಲ್ಪಡುವ, **ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯ ಆಚೆಗಿನ ಪ್ರದೇಶಗಳಲ್ಲಿ** (ABNJ) ಖಚಿತಪಡಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.
- **83 ಸದಸ್ಯ ರಾಷ್ಟ್ರಗಳು:-** ಭಾರತವು ಇದಕ್ಕೆ ಸಹಿ ಹಾಕಿದೆಯಾದರೂ, ಇನ್ನೂ BBNJ ಒಪ್ಪಂದವನ್ನು ದೃಢೀಕರಿಸಿಲ್ಲ.

## ಬೀಜ ಕಾಯ್ದೆ, 2026 ಮತ್ತು ರೈತರ ಮೇಲೆ ಇದರ ಪ್ರಭಾವ

(ಸಾಮಾನ್ಯ ಅಧ್ಯಯನ- 3/ಕೃಷಿ)

**ಇದೀಗ ಸುದ್ದಿಯಲ್ಲಿದೆ:**

- ಇತ್ತೀಚೆಗೆ, **ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು** "ಬೀಜ ಕಾಯ್ದೆ, 2026" ರ ವೈಶಿಷ್ಟ್ಯಗಳು ಮತ್ತು ರೈತರ ಮೇಲೆ ಇದರ ಪ್ರಭಾವದ ಬಗ್ಗೆ ವಿವರಣೆ ನೀಡಿದರು.
- ಬೀಜ ಕಾಯ್ದೆ, 2026 ಅನ್ನು ಸಂಸತ್ತಿನ ಮುಂಬರುವ ಬಜೆಟ್ ಅಧಿವೇಶನದಲ್ಲಿ ಮಂಡಿಸುವ ನಿರೀಕ್ಷೆಯಿದೆ.

**ಬೀಜ ಕಾಯ್ದೆ 2026 ರ ಪ್ರಮುಖ ಅಂಶಗಳು:**

- **ದೇಶಾದ್ಯಂತ ಬೀಜದ ಮೂಲ ಪತ್ತೆಹಚ್ಚುವಿಕೆ:-** ವಾಣಿಜ್ಯ ಉದ್ದೇಶದಿಂದ ಮಾರಾಟವಾಗುವ ಬಿತ್ತನೆ ಬೀಜದ ಪ್ರತಿ ಪ್ಯಾಕೆಟ್, **ರೈತರು ಸ್ಕ್ಯಾನ್ ಮಾಡಬಹುದಾದ ಕ್ಯೂಆರ್ (QR) ಕೋಡ್** ಅನ್ನು ಹೊಂದಿರುತ್ತದೆ.
- **ಸ್ಕ್ಯಾನಿಂಗ್ ಈ ಕೆಳಗಿನ ಪ್ರಮುಖ ಮಾಹಿತಿಯನ್ನು ಹೊಂದಿರುತ್ತದೆ ಮತ್ತು ಒದಗಿಸುತ್ತದೆ:-**
    1. ಬೀಜವನ್ನು ಯಾರು ಉತ್ಪಾದಿಸಿದರು,
    2. ಎಲ್ಲಿಂದ ಪಡೆಯಲಾಗಿದೆ
    3. ಯಾವ ಮಾರಾಟಗಾರರು ಅದನ್ನು ಮಾರಾಟ ಮಾಡಿದ್ದಾರೆ.
- **ನೊಂದ ರೈತರಿಗೆ ತ್ವರಿತ ಪರಿಹಾರ:-** ಅನಾಮಧೇಯ ಬೀಜ ಮಾರಾಟದ ನಿರ್ಮೂಲನೆ, ನಕಲಿ ಅಥವಾ ಕಳಪೆ ಗುಣಮಟ್ಟದ ಬೀಜಗಳನ್ನು ತ್ವರಿತವಾಗಿ ಪತ್ತೆಹಚ್ಚುವ ಗುರಿಯನ್ನು ಇದು ಹೊಂದಿದ್ದು, ನೊಂದ ರೈತರಿಗೆ ತ್ವರಿತ ಪರಿಹಾರಗಳನ್ನು ಕಂಡುಕೊಳ್ಳಲು ಅನುವು ಮಾಡಿಕೊಡುತ್ತದೆ.
- **ಬೀಜ ಕಂಪನಿಗಳು ಮತ್ತು ಮಾರಾಟಗಾರರ ಕಡ್ಡಾಯ ನೋಂದಣಿ:-** **ವಾಣಿಜ್ಯ ಉದ್ದೇಶದ ಬೀಜ ಉತ್ಪಾದಕರ, ವರ್ತಕರ ಮತ್ತು ವಿತರಕರ** ಕಡ್ಡಾಯ ನೋಂದಣಿಯನ್ನು ಈ ಕಾಯ್ದೆಯು ಪ್ರಸ್ತಾಪಿಸುತ್ತದೆ.
- **ಕಳಪೆ ಮತ್ತು ನಕಲಿ ಬೀಜಗಳಿಗೆ ಕಠಿಣ ದಂಡಗಳು:-** ಉದ್ದೇಶಪೂರ್ವಕ ಉಲ್ಲಂಘನೆಗಳಿಗಾಗಿ, ಹೊಸ ಕಾಯ್ದೆಯು **₹30 ಲಕ್ಷದವರೆಗೆ** ದಂಡ ಮತ್ತು ಸಂಭವನೀಯ **ಜೈಲು ಶಿಕ್ಷೆಯನ್ನು** ಪ್ರಸ್ತಾಪಿಸುತ್ತದೆ.
- **ಸಾಂಪ್ರದಾಯಿಕ ಬೀಜ ಪದ್ಧತಿಗಳ ಸಂರಕ್ಷಣೆ:-** **ಸಮುದಾಯದೊಳಗೆ ಬೀಜಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು, ಹಂಚಿಕೊಳ್ಳುವುದು ಮತ್ತು ವಿನಿಮಯ** ಮಾಡಿಕೊಳ್ಳುವಂತಹ ರೈತರ ಸಾಂಪ್ರದಾಯಿಕ ಪದ್ಧತಿಗಳನ್ನು **ನಿರ್ಬಂಧಿಸುವುದಿಲ್ಲ** ಎಂದು ಸರ್ಕಾರಿ ಅಧಿಕಾರಿಗಳು ಒತ್ತಿ ಹೇಳಿದ್ದಾರೆ.
- ಹೊಸ ಕಾಯ್ದೆಯು **ವಾಣಿಜ್ಯ ಉದ್ದೇಶದ ಬೀಜದ ಗುಣಮಟ್ಟದ** ಮೇಲೆ ಮಾತ್ರ ಗಮನಹರಿಸುತ್ತದೆ, ಆದರೆ ಸಾಂಪ್ರದಾಯಿಕ ಹಾಗೂ ಬ್ರ್ಯಾಂಡ್-ರಹಿತ ಬೀಜ ವ್ಯವಸ್ಥೆಗಳ ಮೇಲೆ ಗಮನ ಹರಿಸುವುದಿಲ್ಲ.
- **ಆಮದು ಮಾಡಿಕೊಂಡ ಬೀಜಗಳ ವೈಜ್ಞಾನಿಕ ಮೌಲ್ಯಮಾಪನ:-** ಭಾರತೀಯ ಮಾರುಕಟ್ಟೆಯನ್ನು ಪ್ರವೇಶಿಸುವ ಮೊದಲು ಅವು ಪರಿಸರೀಯ, ಕೃಷಿ ಪದ್ಧತಿಯ ಮತ್ತು ಗುಣಮಟ್ಟದ ಮಾನದಂಡಗಳನ್ನು ಪೂರೈಸುವುದನ್ನು ಇದು ಖಚಿತಪಡಿಸುತ್ತದೆ.
- **ಸ್ಥಳೀಯ ರೈತರ ಸಂರಕ್ಷಣೆ:-** ಭಾರತದ ಬೆಳೆಯುವ ಪರಿಸ್ಥಿತಿಗಳಿಗೆ ಸೂಕ್ತವಲ್ಲದ **ಕಳಪೆ ವಿದೇಶಿ ಬೀಜಗಳಿಂದ** ಇದು ಸ್ಥಳೀಯ ರೈತರನ್ನು ರಕ್ಷಿಸುತ್ತದೆ.
- **ಸಾಂಸ್ಥಿಕ ಕಾರ್ಯವಿಧಾನಗಳು ಮತ್ತು ಒಕ್ಕೂಟದ ಸಹಕಾರ:-** ವಿವಿಧ ಪ್ರದೇಶಗಳಲ್ಲಿ **ಬೀಜ ಪರೀಕ್ಷೆ, ನೋಂದಣಿ ಮತ್ತು ಕಾನೂನು ಜಾರಿ ಪ್ರಕ್ರಿಯೆಗಳಲ್ಲಿ** ಸಮನ್ವಯವನ್ನು ಸುಧಾರಿಸಲು, **ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಗಳನ್ನು** ರಚಿಸಲು ಈ ಕಾಯ್ದೆಯು ಅವಕಾಶ ಕಲ್ಪಿಸುತ್ತದೆ.

- **ಕೃಷಿಯು ರಾಜ್ಯ ಪಟ್ಟಿಯ ವಿಷಯವಾಗಿದೆ:-** ಭಾರತೀಯ ಸಂವಿಧಾನದ **7ನೇ ಅನುಸೂಚಿಯ** ಅಡಿಯಲ್ಲಿ ರಾಜ್ಯ ಪಟ್ಟಿ ಇದೆ. ಆದ್ದರಿಂದ, ಈ ಕಾಯ್ದೆಯನ್ನು ಅನುಷ್ಠಾನಗೊಳಿಸುವಲ್ಲಿ ಮತ್ತು ಜಾರಿಗೊಳಿಸುವಲ್ಲಿ ಕೇಂದ್ರದ ಜೊತೆಗೆ ರಾಜ್ಯಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

## ತಿರುವಳ್ಳುವರ್ ದಿನ

(ಸಾಮಾನ್ಯ ಅಧ್ಯಯನ- 1/ಇತಿಹಾಸ)

### ಇದೀಗ ಸುದ್ದಿಯಲ್ಲಿದೆ:

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಿರುವಳ್ಳುವರ್ ಅವರ ಸರ್ವಕಾಲಿಕ ಕೃತಿಗಳು ಮತ್ತು ಆದರ್ಶಗಳ ಶಾಶ್ವತ ಪ್ರಭಾವವನ್ನು ಗುರುತಿಸಿ, ಅವರಿಗೆ ಗೌರವ ನಮನ ಸಲ್ಲಿಸಿದರು.

### ತಿರುವಳ್ಳುವರ್ ದಿನದ ಕುರಿತು:

- **ಮೊದಲ ಬಾರಿಗೆ ಆಚರಣೆ:- ಮೇ 17 ಮತ್ತು 18, 1935** ರಂದು.
- ಪ್ರಸ್ತುತ ಸಮಯದಲ್ಲಿ, ಇದನ್ನು ಸಾಮಾನ್ಯವಾಗಿ **ತಮಿಳುನಾಡಿನಲ್ಲಿ ಜನವರಿ 15 ಅಥವಾ 16 ರಂದು 'ಪೊಂಗಲ್' ಆಚರಣೆಯ** ಭಾಗವಾಗಿ ಆಚರಿಸಲಾಗುತ್ತದೆ.

### 'ತಿರುವಳ್ಳುವರ್' ಅವರ ಬಗ್ಗೆ:

- **ಶ್ರೇಷ್ಠ ತಮಿಳು ಕವಿ:-** ಸಾಮಾನ್ಯವಾಗಿ **'ವಳ್ಳುವರ್'** ಎಂದು ಕರೆಯಲ್ಪಡುವ ತಿರುವಳ್ಳುವರ್ ಅವರು, ಒಬ್ಬ ಪ್ರಸಿದ್ಧ ತಮಿಳು ಕವಿ ಮತ್ತು **ತತ್ವಜ್ಞಾನಿಯಾಗಿದ್ದರು.**
- **ತಿರುಕ್ಕುರಳ್ (ದ್ವಿಪದಿಗಳ ಸಂಗ್ರಹ):-** ಇವರು **ನೀತಿ, ರಾಜಕೀಯ, ಆರ್ಥಿಕತೆ ಮತ್ತು ಪ್ರೀತಿಯ ಕುರಿತಾದ** ದ್ವಿಪದಿಗಳ ಸಂಗ್ರಹವಾದ 'ತಿರುಕ್ಕುರಳ್' ಕೃತಿಯ ಕರ್ತೃ ಎಂದು ಪ್ರಸಿದ್ಧರಾಗಿದ್ದಾರೆ.

## ಜಲ್ಲಿಕಟ್ಟು

(ಸಾಮಾನ್ಯ ಅಧ್ಯಯನ- 1/ಸಂಸ್ಕೃತಿ)

### ಇದೀಗ ಸುದ್ದಿಯಲ್ಲಿದೆ:

- **ತಮಿಳುನಾಡು** ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಇತ್ತೀಚೆಗೆ **ಅಲಂಗನಲ್ಲೂರ್‌ನಲ್ಲಿ** ನಡೆದ ಜಲ್ಲಿಕಟ್ಟು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

### ಜಲ್ಲಿಕಟ್ಟು ಕ್ರೀಡೆಯ ಬಗ್ಗೆ:

- ಇದನ್ನು **'ಏರುತಝುವ್ವುತಲ್'** ಎಂತಲೂ ಕರೆಯಲಾಗುತ್ತದೆ.
- **ಗೂಳಿ ಪಳಗಿಸುವ ಕ್ರೀಡೆಯಾಗಿದೆ:- ತಮಿಳುನಾಡಿನಲ್ಲಿ ಸುಗ್ಗಿ ಹಬ್ಬವಾದ 'ಪೊಂಗಲ್' ಆಚರಣೆಯ** ಭಾಗವಾಗಿ ಇದನ್ನು ಸಾಂಪ್ರದಾಯಿಕವಾಗಿ ಆಡಲಾಗುತ್ತದೆ.
- **ಅಯರ್‌ರು ಆಡುತ್ತಿದ್ದ ಕ್ರೀಡೆ:-** ಈ ಗೂಳಿ ಕಾಳಗದ ಇತಿಹಾಸವು **ಕ್ರಿ. ಪೂ. 400-100** ರಷ್ಟು ಹಳೆಯದಾಗಿದ್ದು, ಆ ಸಮಯದಲ್ಲಿ **ಭಾರತದ ಜನಾಂಗೀಯ ಗುಂಪಾದ 'ಅಯರ್‌ರು'** ಇದನ್ನು ಆಡುತ್ತಿದ್ದರು.
- **ಜಲ್ಲಿ + ಕಟ್ಟು:-** ಎಂಬ ಎರಡು ಪದಗಳಿಂದ ಬಂದಿದೆ. 'ಜಲ್ಲಿ' ಎಂದರೆ **ಬೆಳ್ಳಿ ಮತ್ತು ಚಿನ್ನದ ನಾಣ್ಯಗಳು** ಮತ್ತು 'ಕಟ್ಟು' ಎಂದರೆ **ಕಟ್ಟಿರುವುದು.**
- ಈ ಹಬ್ಬದಲ್ಲಿ, **ಜನರ ಗುಂಪಿನ ನಡುವೆ ಗೂಳಿಯನ್ನು ಮುಕ್ತವಾಗಿ ಬಿಡಲಾಗುತ್ತದೆ** ಮತ್ತು ಅದನ್ನು **ಯಾರು ಪಳಗಿಸುತ್ತಾರೋ ಅವರು ಅದರ ಕೊಂಬಿಗೆ ಕಟ್ಟಿದ ನಾಣ್ಯಗಳನ್ನು ಬಹುಮಾನವಾಗಿ** ಪಡೆಯುತ್ತಾರೆ.
- ಈ ಕ್ರೀಡೆಯಲ್ಲಿ ಭಾಗವಹಿಸುವ ಜನರು ಪ್ರಾಣಿಯನ್ನು ತಡೆಯಲು ಅದರ **ಡುಬ್ಬವನ್ನು ಹಿಡಿದಿಟ್ಟುಕೊಳ್ಳಲು** ಪ್ರಯತ್ನಿಸುತ್ತಾರೆ ಅಥವಾ ಕೆಲವೊಮ್ಮೆ ಅವರು **ಗೂಳಿಯೊಂದಿಗೆ ಓಡುತ್ತಾರೆ.**
- **'ಪುಲಿಕುಲಂ' ಅಥವಾ 'ಕಾಂಗಯಂ' ತಳಿಯ ಹೋರಿಗಳ ಬಳಕೆ:-** ಈ ಹಬ್ಬವು ರಾಜ್ಯದ ಸಾಂಸ್ಕೃತಿಕ ಪ್ರವಾಸೋದ್ಯಮದ ಭಾಗವಾಗಿದೆ.
- **ಈ ಕ್ರೀಡೆಯ ವಿವಿಧ ಪ್ರಕಾರಗಳು:- 'ವಾಡಿ ಮಂಜುವಿರಟ್ಟು', 'ವೇಲಿ ವಿರಟ್ಟು' ಮತ್ತು 'ವಟಂ ಮಂಜುವಿರಟ್ಟು'.**

### ಪ್ರಮುಖ ಕಳವಳಗಳು:

- **ಪ್ರಾಣಿ ಹಿಂಸೆ ಮತ್ತು ನರಳುವಿಕೆ:-** ಗೂಳಿಗಳನ್ನು ಪ್ರಚೋದಿಸಲು ಮದ್ಯ, ಕೋಲುಗಳು, ಚಾಕುಗಳು ಮತ್ತು ಮೆಣಸಿನ ಪುಡಿಯನ್ನು ಕಣ್ಣುಗಳಿಗೆ ಹಾಕಲಾಗುತ್ತದೆ. ತರಬೇತಿ ಮತ್ತು ಪಂದ್ಯದ ಸಮಯದಲ್ಲಿ ಬಾಲವನ್ನು ತಿರುಚುವುದು ಮತ್ತು ದೈಹಿಕ ದೌರ್ಜನ್ಯವು ಗೂಳಿಗಳಿಗೆ ವಿಪರೀತ ಒತ್ತಡ, ನೋವು ಮತ್ತು ಗಂಭೀರ ಗಾಯಗಳನ್ನು ಉಂಟುಮಾಡುತ್ತದೆ.
- **ಮಾನವ ಗಾಯಗಳು ಮತ್ತು ಸಾವುಗಳು:-** ಈ ಪಂದ್ಯಾವಳಿಯು ಗಮನಾರ್ಹ ಅಪಾಯಗಳನ್ನು ತಂದೊಡ್ಡುತ್ತದೆ. ಹಿಂದಿನ ವರ್ಷಗಳಲ್ಲಿ ಸ್ಪರ್ಧಿಗಳು ಮತ್ತು ಗೂಳಿಗಳು ಇಬ್ಬರಿಗೂ ಹಲವಾರು ಗಾಯಗಳು ಮತ್ತು ಸಾವುಗಳು ಸಂಭವಿಸಿರುವುದು ವರದಿಯಾಗಿದೆ.
- **ನೈತಿಕ ಪರಿಗಣನೆಗಳು:-** ಸಾಂಸ್ಕೃತಿಕ ಮಹತ್ವ ಏನೇ ಇದ್ದರೂ, ಮನರಂಜನೆಗಾಗಿ ಗೂಳಿಗಳನ್ನು ಬಳಸುವುದು

**ಅನೈತಿಕವಾಗಿದೆ** ಎಂದು ಪ್ರಾಣಿ ಹಕ್ಕುಗಳ ಸಂಘಗಳು ವಾದಿಸುತ್ತವೆ. ಈ ಆಚರಣೆಯು ಪ್ರಾಣಿಗಳನ್ನು ಶೋಷಿಸುತ್ತದೆ ಮತ್ತು ಅವುಗಳಿಗೆ ಆಘಾತವನ್ನು ಉಂಟುಮಾಡುತ್ತದೆ.

- **2023 ರಲ್ಲಿ ಸರ್ವೋಚ್ಚ ನ್ಯಾಯಾಲಯವು, 'ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವಿಕೆ (PCA) ಕಾಯ್ದೆ, 1960' ಕ್ಕೆ ತಮಿಳುನಾಡು, ಮಹಾರಾಷ್ಟ್ರ ಮತ್ತು ಕರ್ನಾಟಕದ** ಶಾಸಕಾಂಗಗಳು ಮಾಡಿದ ತಿದ್ದುಪಡಿಗಳನ್ನು ಎತ್ತಿಹಿಡಿದಿದೆ. ಇದು **ಜಲ್ಲಿಕಟ್ಟು, ಕಂಬಳ ಮತ್ತು ಎತ್ತಿನ ಗಾಡಿ ಓಟದಂತಹ** ಗೂಳಿ ಪಳಗಿಸುವ ಕ್ರೀಡೆಗಳಿಗೆ ಅನುಮತಿ ನೀಡಿದೆ.

## ಚಾಬಹಾರ್ ಬಂದರು

(ಸಾಮಾನ್ಯ ಅಧ್ಯಯನ-2/ಅಂತರರಾಷ್ಟ್ರೀಯ ಸಂಬಂಧಗಳು)

**ಇದೀಗ ಸುದ್ದಿಯಲ್ಲಿದೆ:**

- ಅಮೆರಿಕದ ನವೀಕರಿಸಿದ ನಿರ್ಬಂಧಗಳ ಕಾರಣದಿಂದಾಗಿ ಭಾರತವು ಚಾಬಹಾರ್ ಬಂದರಿನಿಂದ ಹೊರಬರಲು ಯೋಜಿಸುತ್ತಿದೆ ಎಂಬ ವರದಿಗಳನ್ನು ಭಾರತವು ಅಲ್ಲಗಳೆದಿದೆ.
- ಕಾರ್ಯತಂತ್ರದ ಚಾಬಹಾರ್ ಬಂದರಿನಲ್ಲಿ ಕಾರ್ಯಾಚರಣೆಯನ್ನು ಮುಂದುವರಿಸಲು, ಭಾರತವು ಅಮೆರಿಕ ಮತ್ತು ಇರಾನ್ ಎರಡೂ ದೇಶಗಳೊಂದಿಗೂ ಸಂಪರ್ಕದಲ್ಲಿದೆ ಎಂದು ಪುನರುಚ್ಚರಿಸಿದೆ.

**ಚಾಬಹಾರ್ ಸಮುದ್ರ ಬಂದರಿನ ಬಗ್ಗೆ:**

- ಸ್ಥಳ:- ಇದು **ಆಗ್ನೇಯ ಇರಾನ್‌ನ ಓಮನ್ ಕೊಲ್ಲಿಯ** ತೀರದಲ್ಲಿದೆ.
- ಈ ಬಂದರು 2 ಪ್ರತ್ಯೇಕ ಬಂದರುಗಳನ್ನು ಒಳಗೊಂಡಿದೆ. ಅವುಗಳೆಂದರೆ,
    1. **ಶಾಹಿದ್ ಕಲಂತರಿ**
    2. **ಶಾಹಿದ್ ಬೆಹೆಸ್ಟಿ**
- ಈ ಬಂದರು **ಪಾಕಿಸ್ತಾನದ ಗ್ವಾದರ್ ಬಂದರಿನಿಂದ ಪಶ್ಚಿಮಕ್ಕೆ** ಕೇವಲ 170 ಕಿಲೋಮೀಟರ್ ದೂರದಲ್ಲಿದೆ.
- ಕಾರ್ಯತಂತ್ರದ ಸ್ಥಳ:- **ಅಫ್ಘಾನಿಸ್ತಾನದ ಹಾಜಿಗಾಕ್ ಗಣಿಯಿಂದ ಕಬ್ಬಿಣ** ಮತ್ತು **ಕಜಕಿಸ್ತಾನ್, ತುರ್ಕಮೆನಿಸ್ತಾನ್ ಹಾಗೂ ಉಜ್ಬೇಕಿಸ್ತಾನ್‌ನಂತಹ ಮಧ್ಯ ಏಷ್ಯಾದ ದೇಶಗಳಿಂದ ಇತರ ನೈಸರ್ಗಿಕ ಸಂಪನ್ಮೂಲಗಳನ್ನು** ಪಡೆಯಲು ಭಾರತಕ್ಕೆ ಪ್ರವೇಶದ ಅಗತ್ಯವಿದೆ. ಚಾಬಹಾರ್ ಬಂದರು ಈ ಸಂಪನ್ಮೂಲಗಳ ಪ್ರವೇಶವನ್ನು ಸಾಧ್ಯವಾಗಿಸುತ್ತದೆ.
- **ಅಂತರರಾಷ್ಟ್ರೀಯ ಉತ್ತರ-ದಕ್ಷಿಣ ಸಾರಿಗೆ ಸಂಪರ್ಕ ಮಾರ್ಗ (INSTC):-** ಈ ಬಂದರು INSTC ನ ಭಾಗವಾಗಿದೆ. ಇದು **ಹಿಂದೂ ಮಹಾಸಾಗರವನ್ನು ಉತ್ತರ ಯುರೋಪ್‌ಗೆ ಸಂಪರ್ಕಿಸುವ ಬಹು-ಮಾದರಿ ಸಾರಿಗೆ** ಯೋಜನೆಯಾಗಿದೆ.

## ಕೇಂದ್ರ ಜಾಗೃತ ಆಯೋಗ

(ಸಾಮಾನ್ಯ ಅಧ್ಯಯನ-2/ಆಡಳಿತ)

**ಇದೀಗ ಸುದ್ದಿಯಲ್ಲಿದೆ:**

- ಇತ್ತೀಚೆಗೆ, **ಭಾರತದ ರಾಷ್ಟ್ರಪತಿಗಳು, 'ಪ್ರವೀಣ್ ವಶಿಷ್ಟ'** ಅವರನ್ನು ಕೇಂದ್ರ ಜಾಗೃತ ಆಯೋಗದಲ್ಲಿ 'ಜಾಗೃತ ಆಯುಕ್ತರನ್ನಾಗಿ' ನೇಮಕ ಮಾಡಿದ್ದಾರೆ.

**ಕೇಂದ್ರ ಜಾಗೃತ ಆಯೋಗ (CVC)ದ ಬಗ್ಗೆ:**

- **ದೆಹಲಿ ವಿಶೇಷ ಪೊಲೀಸ್ ಸ್ಥಾಪನಾ ಕಾಯ್ದೆ, 1946 ರ ಅಡಿಯಲ್ಲಿ 1964 ರಲ್ಲಿ ಸ್ಥಾಪಿಸಲಾಯಿತು.**
- **ಸಂತಾನಂ ಸಮಿತಿಯ ಶಿಫಾರಸು:- ಭ್ರಷ್ಟಾಚಾರ ತಡೆಗಟ್ಟುವಿಕೆ ಕುರಿತ** ಈ ಸಮಿತಿಯ ಶಿಫಾರಸುಗಳ ಮೇರೆಗೆ ಸ್ಥಾಪಿಸಲಾಯಿತು.
- **ಕೇಂದ್ರ ಜಾಗೃತ ಆಯೋಗ ಕಾಯ್ದೆ (CVC), 2003 ರ ಅಡಿಯಲ್ಲಿ ಶಾಸನಬದ್ಧ ಸಂಸ್ಥೆಯಾಯಿತು:-** ಇದು **ಸಾರ್ವಜನಿಕ ಆಡಳಿತದಲ್ಲಿ ಸಮಗ್ರತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಾತ್ರಿಪಡಿಸುವ** ಜವಾಬ್ದಾರಿಯನ್ನು ಹೊತ್ತಿರುವ ಭಾರತದ ಅತ್ಯುನ್ನತ ಶಾಸನಬದ್ಧ ಸಂಸ್ಥೆಯಾಗಿದೆ.

**ಕೇಂದ್ರ ಜಾಗೃತ ಆಯೋಗ ಕಾಯ್ದೆ, 2003 ರ ಅನ್ವಯ,**

**ಕೇಂದ್ರ ಜಾಗೃತ ಆಯೋಗದ ಸಂರಚನೆ:-**

- **ಒಬ್ಬರು ಕೇಂದ್ರ ಜಾಗೃತ ಆಯುಕ್ತರು** ಮತ್ತು
- **ಇಬ್ಬರು ಜಾಗೃತ ಆಯುಕ್ತರ** ನೇಮಕಕ್ಕೆ ಅವಕಾಶವಿದೆ.

**ನೇಮಕಾತಿ:-** **ಭಾರತದ ರಾಷ್ಟ್ರಪತಿಗಳು** ಕೇಂದ್ರ ಜಾಗೃತ ಆಯುಕ್ತರು ಮತ್ತು ಜಾಗೃತ ಆಯುಕ್ತರನ್ನು ನೇಮಕ ಮಾಡುತ್ತಾರೆ.

**ಉನ್ನತಾಧಿಕಾರ ಸಮಿತಿಯ ಶಿಫಾರಸುಗಳ ಮೇರೆಗೆ ನೇಮಕಾತಿ:-**

1. **ಪ್ರಧಾನಮಂತ್ರಿ**
2. **ಕೇಂದ್ರ ಗೃಹ ಸಚಿವರು**
3. **ಲೋಕಸಭೆಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಿದೆ**

**ಅಧಿಕಾರಾವಧಿ:-** ಜಾಗೃತ ಆಯುಕ್ತರ **4 ವರ್ಷಗಳು** ಅಥವಾ ಅಧಿಕಾರದಲ್ಲಿರುವವರು **65 ವರ್ಷ ವಯಸ್ಸನ್ನು** ತಲುಪುವವರೆಗೆ (ಯಾವುದು ಮೊದಲೋ ಅದು) ಅಧಿಕಾರದಲ್ಲಿ ಇರುತ್ತಾರೆ.

ಕೇಂದ್ರ ಜಾಗೃತ ಆಯೋಗದ ಅಧಿಕಾರ ಮತ್ತು ಕಾರ್ಯಗಳು:

- **ಭ್ರಷ್ಟಾಚಾರವನ್ನು ನಿಯಂತ್ರಿಸುತ್ತದೆ:- CVC ಕಾಯ್ದೆ, 2003** ರ ಅನ್ವಯ, ಭ್ರಷ್ಟಾಚಾರವನ್ನು ಎದುರಿಸಲು ಮತ್ತು **ಸಾರ್ವಜನಿಕ ಆಡಳಿತದಲ್ಲಿ ಸಮಗ್ರತೆ, ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು** ಖಾತ್ರಿಪಡಿಸುವ ಅಧಿಕಾರ ಮತ್ತು ಜವಾಬ್ದಾರಿಯನ್ನು ಕೇಂದ್ರ ಜಾಗೃತ ಆಯೋಗವು (CVC) ಹೊಂದಿದೆ.
- **ಜಾಗೃತ ಆಡಳಿತ ವ್ಯವಸ್ಥೆಯ ಮೇಲೆ ಮೇಲ್ವಿಚಾರಣೆ:-** ಈ ಆಯೋಗವು **ಕೇಂದ್ರ ಸರ್ಕಾರದ ಸಚಿವಾಲಯಗಳು, ಇಲಾಖೆಗಳು ಮತ್ತು ಸಂಸ್ಥೆಗಳ** ಜಾಗೃತ ಆಡಳಿತ ವ್ಯವಸ್ಥೆಯ ಮೇಲೆ ಮೇಲ್ವಿಚಾರಣೆಯನ್ನು ನಡೆಸುತ್ತದೆ.
- **ಅತ್ಯುನ್ನತ ಜಾಗೃತ ಸಂಸ್ಥೆ:-** ಇದು **ಲೋಕಪಾಲ್ ಶಿಫಾರಸು ಮಾಡಿದ ಪ್ರಕರಣಗಳು** ಮತ್ತು **PIDPI ಚೌಕಟ್ಟಿನ ಅಡಿಯಲ್ಲಿ ಬರುವ ಮಾಹಿತಿದಾರರ ದೂರುಗಳನ್ನು** ಒಳಗೊಂಡಂತೆ, **ಭ್ರಷ್ಟಾಚಾರ-ವಿರೋಧಿ ವಿಚಾರಣೆಗಳ ಮೇಲೆ ಮೇಲ್ವಿಚಾರಣೆ ಮಾಡುವುದು ಹಾಗೂ ಮಾರ್ಗದರ್ಶನ** ನೀಡುತ್ತದೆ.
- **ಕೇಂದ್ರೀಯ ತನಿಖಾ ದಳದ (CBI) ಕಾರ್ಯನಿರ್ವಹಣೆಯ ಮೇಲ್ವಿಚಾರಣೆ:-** ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ, **ಭ್ರಷ್ಟಾಚಾರ ತಡೆ ಕಾಯ್ದೆ, 1988** ರ ಅಡಿಯಲ್ಲಿ ಇದು ಮೇಲ್ವಿಚಾರಣೆ ಮಾಡುತ್ತದೆ.
- **ಉನ್ನತ ಅಧಿಕಾರಿಗಳ ನೇಮಕಾತಿಯನ್ನು ಶಿಫಾರಸು ಮಾಡುವ ಸಮಿತಿಗಳ ಅಧ್ಯಕ್ಷತೆ:- ಜಾರಿ ನಿರ್ದೇಶನಾಲಯ (ED) ಮತ್ತು ಸಿಬಿಐನಲ್ಲಿ (ಸಿಬಿಐ ನಿರ್ದೇಶಕರನ್ನು ಹೊರತುಪಡಿಸಿ,** ಎಸ್‌ಪಿ ಮಟ್ಟ ಮತ್ತು ಅದಕ್ಕಿಂತ ಮೇಲಿನ ಹಂತದ) ಉನ್ನತ ಅಧಿಕಾರಿಗಳ ನೇಮಕಾತಿಯಲ್ಲಿ ಇದು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

## ಬೇರು ಒಣಗುವ (ಬಾಡುವ) ರೋಗ

(ಸಾಮಾನ್ಯ ಅಧ್ಯಯನ-3/ ಕೃಷಿ)

ಇದೀಗ ಸುದ್ದಿಯಲ್ಲಿದೆ:

- **ಭಾರತದ ಪರ್ಯಾಯ ದ್ವೀಪದಲ್ಲಿ ತೆಂಗಿನ ಕೃಷಿಯು, ಫೈಟೊಪ್ಲಾಸ್ಮಾ** ಪ್ರೇರಿತ **ಬೇರು ಒಣಗುವ (ರೂಟ್ ವಿಲ್ಟ್) ರೋಗದ** ಕಾರಣದಿಂದಾಗಿ ಗಂಭೀರ ಅಪಾಯಗಳನ್ನು ಎದುರಿಸುತ್ತಿದೆ.

ಬೇರು ಒಣಗುವ (ರೂಟ್ ವಿಲ್ಟ್) ರೋಗದ ಬಗ್ಗೆ:

- **ಫೈಟೊಪ್ಲಾಸ್ಮಾ ಪ್ರೇರಿತ:-** ತೆಂಗಿನ ಬೇರು ಒಣಗುವ ರೋಗವು 'ಫೈಟೊಪ್ಲಾಸ್ಮಾ' ಎಂಬ **ಕೋಶ ಭಿತ್ತಿ ರಹಿತ ಬ್ಯಾಕ್ಟೀರಿಯಾದ ರೋಗಕಾರಕದಿಂದ** ಉಂಟಾಗುತ್ತದೆ.
- **ಮಾರಣಾಂತಿಕವಲ್ಲದ, ಗಿಡವನ್ನು ತೀವ್ರವಾಗಿ ದುರ್ಬಲಗೊಳಿಸುವ ರೋಗ:-** ಎಂದು ವರ್ಗೀಕರಿಸಲಾಗಿದೆ.
- **ಕೇರಳದ ಎರಟ್ಟುಪೆಟ್ಟಾದಲ್ಲಿ ಮೊದಲ ವರದಿ:-** ಈ ರೋಗವು 150 ವರ್ಷಗಳ ಹಿಂದೆ ಕೇರಳದಲ್ಲಿ ವರದಿಯಾಯಿತು.
- **ನಿರ್ದಿಷ್ಟವಾಗಿ ಗುಣಪಡಿಸುವ ಚಿಕಿತ್ಸೆ ಇಲ್ಲ:-** ದೀರ್ಘಕಾಲದ ಸಂಶೋಧನಾ ಪ್ರಯತ್ನಗಳ ಹೊರತಾಗಿಯೂ, ಇಲ್ಲಿಯವರೆಗೆ ಇದಕ್ಕೆ ಯಾವುದೇ ನಿರ್ದಿಷ್ಟ ಗುಣಪಡಿಸುವ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಲಾಗಿಲ್ಲ.
- ಈ ರೋಗದ ಪ್ರಮುಖ ಲಕ್ಷಣಗಳು:-
    1. ಎಲೆಗಳು ಕ್ರಮೇಣ **ಹಳದಿ ಬಣ್ಣಕ್ಕೆ ತಿರುಗುವುದು ಮತ್ತು ಬಾಡುವುದು,**
    2. ನಂತರ **ಇಳುವರಿಯಲ್ಲಿ ತೀವ್ರ ಕುಸಿತ** ಉಂಟಾಗುವುದು,
    3. ಅಂತಿಮವಾಗಿ **ಎಲ್ಲಾ ಕಾಯಿಗಳು ಉದುರುವುದು.**
- **ರಸ ಹೀರುವ ಕೀಟಗಳ ಮೂಲಕ ಹರಡುತ್ತದೆ:-** ಬೇರು ಒಣಗುವ ರೋಗವು ಕೀಟ ವಾಹಕಗಳ ಮೂಲಕ ಹರಡುತ್ತದೆ. **ಗಾಳಿಯ ಚಲನೆ ಮತ್ತು ದೊಡ್ಡ, ತಡೆರಹಿತ ತೆಂಗಿನ ತೋಟಗಳು** ಈ ರೋಗದ ಹರಡುವಿಕೆಗೆ ಮತ್ತಷ್ಟು ಸಹಕಾರಿಯಾಗಿವೆ.

ತೆಂಗು (ಕೊಕೊಸ್ ನುಸಿಫೆರಾ) ಬೆಳೆಯ ಬಗ್ಗೆ:

- **ಭಾರತದ ಪ್ರಮುಖ ಬಹುವಾರ್ಷಿಕ ತೋಟಗಾರಿಕಾ ಬೆಳೆ:-** ಇದನ್ನು ಅತೀ ಹೆಚ್ಚಾಗಿ **ತೇವಾಂಶವುಳ್ಳ ಉಷ್ಣವಲಯ** ಮತ್ತು **ಕರಾವಳಿ ಪ್ರದೇಶಗಳಲ್ಲಿ** ಬೆಳೆಯಲಾಗುತ್ತದೆ.
- ಮಣ್ಣು:- ನೀರು ಚೆನ್ನಾಗಿ ಬಸಿದು ಹೋಗುವ **ಮರಳು ಮಿಶ್ರಿತ ಕಡುಮಣ್ಣು** (ಲೋಮ್ ಮಣ್ಣು).
- **ಹೆಚ್ಚಿನ ಆರ್ದ್ರತೆಯ** ಅವಶ್ಯಕತೆ ಇದೆ.
- ತಾಪಮಾನ:- **27 ರಿಂದ 32 ಡಿಗ್ರಿ ಸೆಲ್ಸಿಯಸ್** . ಇದಕ್ಕೆ ಸಾಕಷ್ಟು **ಸೂರ್ಯನ ಬೆಳಕು** ಅತ್ಯಗತ್ಯವಿರುತ್ತದೆ
- ಭಾರತವು ಪ್ರಪಂಚದಲ್ಲೇ ತೆಂಗು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ದೇಶಗಳಲ್ಲಿ ಒಂದಾಗಿದೆ. **ಕೇರಳ, ತಮಿಳುನಾಡು ಮತ್ತು ಕರ್ನಾಟಕ** ರಾಜ್ಯಗಳು ಸೇರಿ ಭಾರತದ ಒಟ್ಟು ತೆಂಗು ಉತ್ಪಾದನೆಗೆ ಸುಮಾರು **82–83% ರಷ್ಟು** ಕೊಡುಗೆ ನೀಡುತ್ತವೆ.

## ಕಾಜೀರಂಗದಲ್ಲಿ ಎತ್ತರದ ವನ್ಯಜೀವಿ ಸಂಚಾರ ಮಾರ್ಗ

(ಸಾಮಾನ್ಯ ಅಧ್ಯಯನ-3/ಪರಿಸರ)

ಇದೀಗ ಸುದ್ದಿಯಲ್ಲಿದೆ:

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಸ್ಸಾಂನ ಕಾಜೀರಂಗದಲ್ಲಿ 34.5 ಕಿಲೋಮೀಟರ್ ಉದ್ದದ ಎತ್ತರದ ವನ್ಯಜೀವಿ ಸಂಚಾರ ಮಾರ್ಗವನ್ನು ಉದ್ಘಾಟಿಸಲು ಸಜ್ಜಾಗಿದ್ದಾರೆ.

**ಕಾಜೀರಂಗದ ಎತ್ತರದ ವನ್ಯಜೀವಿ ಸಂಚಾರ ಮಾರ್ಗದ ಬಗ್ಗೆ:**

- ಉದ್ದೇಶ:- ವಿಶೇಷವಾಗಿ ವಾರ್ಷಿಕ ಪ್ರವಾಹದ ಸಮಯದಲ್ಲಿ, **ಪ್ರಾಣಿಗಳ ಸುರಕ್ಷಿತ ಚಲನವಲನಕ್ಕೆ** ಅನುವು ಮಾಡಿಕೊಡುವುದು.
- ಸಂಪರ್ಕ ಸುಧಾರಣೆ:- ಇದು **ಗುವಾಹಟಿ, ಕಾಜಿರಂಗ ರಾಷ್ಟ್ರೀಯ ಉದ್ಯಾನವನ ಮತ್ತು ನುಮಾಲಿಘರ್‌ಗಳ** ನಡುವಿನ ಸಂಪರ್ಕವನ್ನು ಸಹ ಸುಧಾರಿಸುತ್ತದೆ.

**'ಕಾಜಿರಂಗ ರಾಷ್ಟ್ರೀಯ ಉದ್ಯಾನವನ'ದ ಬಗ್ಗೆ:**

- ಇದು **ಬ್ರಹ್ಮಪುತ್ರ ಕಣಿವೆಯ ಪ್ರವಾಹದ ಬಯಲು ಸೀಮೆಯ ಹುಲ್ಲುಗಾವಲುಗಳನ್ನು** ಪ್ರತಿನಿಧಿಸುವ, ಅತ್ಯಂತ ದೊಡ್ಡ ಹಾಗೂ ಅಖಂಡವಾದ ಪ್ರದೇಶವಾಗಿದೆ.
- **'ಜೈವಿಕ ಅನುಕ್ರಮಣಿಕೆ'ಯ ವಿವಿಧ ಹಂತ:-** ಇಲ್ಲಿನ ಹುಲ್ಲುಗಾವಲುಗಳ ಪರಿಸರ ವ್ಯವಸ್ಥೆಯಲ್ಲಿ, ಸ್ಪಷ್ಟವಾಗಿ ಕಾಣಬಹುದು.
- **ಒಂದು ಕೊಂಬಿನ ಖಡ್ಗಮೃಗಗಳಿಗೆ ಹೆಸರುವಾಸಿ:-** ವಿಶ್ವದ **70% ಕ್ಕಿಂತ ಹೆಚ್ಚು** 'ಒಂದು ಕೊಂಬಿನ ಖಡ್ಗಮೃಗ'ಗಳಿಗೆ ಈ ಉದ್ಯಾನವನವು ಆವಾಸಸ್ಥಾನವಾಗಿದೆ.
- ಇದನ್ನು 1950 ರಲ್ಲಿ 'ವನ್ಯಜೀವಿ ಅಭಯಾರಣ್ಯ'ವನ್ನಾಗಿ ಘೋಷಿಸಲಾಯಿತು.
- **1974 ರಲ್ಲಿ ಕಾಜಿರಂಗ ರಾಷ್ಟ್ರೀಯ ಉದ್ಯಾನವನ:-** **'ವನ್ಯಜೀವಿ (ರಕ್ಷಣೆ) ಕಾಯ್ದೆ, 1972'** ರ ಅಡಿಯಲ್ಲಿ ಅಧಿಸೂಚಿಸಲಾಯಿತು.
- **ವಿಶ್ವ ಪರಂಪರೆಯ ತಾಣ:-** ಇದನ್ನು **1985 ರಲ್ಲಿ** ಘೋಷಿಸಲಾಯಿತು.
- **ಪ್ರಮುಖ ಪಕ್ಷಿ ಪ್ರದೇಶ:- ಬರ್ಡ್‌ಲೈಫ್ ಇಂಟರ್‌ನ್ಯಾಶನಲ್ ಸಂಸ್ಥೆಯು** ಇದನ್ನು 'ಪ್ರಮುಖ ಪಕ್ಷಿ ಪ್ರದೇಶ' ಎಂದು ಗುರುತಿಸಿದೆ.

## ಭಾರತದ ವಿದ್ಯುತ್ ವಲಯ

(ಸಾಮಾನ್ಯ ಅಧ್ಯಯನ-3/ಶಕ್ತಿ)

**ಇದೀಗ ಸುದ್ದಿಯಲ್ಲಿದೆ:**

- ಭಾರತದ ವಿದ್ಯುತ್ ವಿತರಣಾ ಸಂಸ್ಥೆಗಳು, 2024-25 ರ ಆರ್ಥಿಕ ವರ್ಷದಲ್ಲಿ ಒಟ್ಟಾರೆಯಾಗಿ **₹2,701 ಕೋಟಿಗಳಷ್ಟು 'ತೆರಿಗೆ ನಂತರದ ಲಾಭ'**ವನ್ನು (PAT) ದಾಖಲಿಸಿವೆ.

**ಭಾರತದ ವಿದ್ಯುತ್ ವಲಯದ ಬಗ್ಗೆ:**

- **ವಿಶ್ವದಲ್ಲೇ ವಿದ್ಯುತ್ ಉತ್ಪಾದನೆ ಮತ್ತು ಬಳಕೆಯಲ್ಲಿ 3ನೇ ಅತಿದೊಡ್ಡ ದೇಶ:-** ಜೂನ್ 2025 ರ ಮಾಹಿತಿಯಂತೆ ಭಾರತವು **476 ಗಿಗಾವ್ಯಾಟ್ (GW) ಸ್ಥಾಪಿತ ಸಾಮರ್ಥ್ಯ**ವನ್ನು ಹೊಂದಿದೆ.
- **ನವೀಕರಿಸಬಹುದಾದ ಇಂಧನದಲ್ಲಿ-4ನೇ ಸ್ಥಾನ:-** 2025 ರ ಮಾಹಿತಿಯಂತೆ, ಭಾರತವು 'ನವೀಕರಿಸಬಹುದಾದ ಇಂಧನ' ಸ್ಥಾಪಿತ ಸಾಮರ್ಥ್ಯದಲ್ಲಿ ಜಾಗತಿಕವಾಗಿ 4ನೇ ಸ್ಥಾನದಲ್ಲಿದೆ. **ಪವನ ಶಕ್ತಿಯಲ್ಲಿ 4ನೇ ಸ್ಥಾನ** ಮತ್ತು **ಸೌರ ಶಕ್ತಿಯಲ್ಲಿ 3ನೇ ಸ್ಥಾನ**ವನ್ನು ಹೊಂದಿದೆ.
- ವಿದ್ಯುತ್ ಬಳಕೆಯಲ್ಲಿ ಮುಂಚೂಣಿಯಲ್ಲಿರುವ ವಲಯಗಳು:-
    1. **ಕೈಗಾರಿಕಾ ವಲಯವು - 41.8%**
    2. ಗೃಹಬಳಕೆ - 24.3%
    3. ಕೃಷಿ - 17%
    4. ವಾಣಿಜ್ಯ ಬಳಕೆ - 8.3%
- **2018 ರ ವೇಳೆಗೆ 100% ಗ್ರಾಮ ವಿದ್ಯುದ್ದೀಕರಣ:-** ಭಾರತವು 2018 ರ ವೇಳೆಗೆ 100% ಗ್ರಾಮ ವಿದ್ಯುದ್ದೀಕರಣವನ್ನು ಸಾಧಿಸಿದೆ ಮತ್ತು ಅಂದಿನಿಂದ **2.8 ಕೋಟಿಗೂ ಹೆಚ್ಚು ಮನೆಗಳಿಗೆ ವಿದ್ಯುತ್ ಜಾಲ ಸಂಪರ್ಕ**ವನ್ನು ಕಲ್ಪಿಸಿದೆ.

**ಸರ್ಕಾರದ ಉಪಕ್ರಮಗಳು:**

- **ರಾಷ್ಟ್ರೀಯ ಸೌರ ಕಾರ್ಯಯೋಜನೆ (NSM):-**
    - ಪ್ರಾರಂಭ:- **2010**
    - ಉದ್ದೇಶ:- ಇದು **ವಿದ್ಯುತ್ ಜಾಲ-ಸಂಪರ್ಕಿತ ಮತ್ತು ಜಾಲ-ರಹಿತ ಸೌರ ವಿದ್ಯುತ್ ಯೋಜನೆಗಳನ್ನು** ಒಳಗೊಂಡಂತೆ, ಸೌರ ಸಾಮರ್ಥ್ಯ ಸ್ಥಾಪನೆಗೆ ಮಹತ್ವಾಕಾಂಕ್ಷೆಯ ಉದ್ದೇಶವನ್ನು ನಿಗದಿಪಡಿಸಿದೆ.
- **ರಾಷ್ಟ್ರೀಯ ಶುದ್ಧ ಇಂಧನ ನಿಧಿ (NCEF):-**
    - ಉದ್ದೇಶ:- **ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ** ಮಾಡಲು ಸಹಾಯ ಮಾಡುವ, **ಶುದ್ಧ ಇಂಧನ ತಂತ್ರಜ್ಞಾನಗಳು ಮತ್ತು ಯೋಜನೆಗಳಲ್ಲಿನ ಸಂಶೋಧನೆ ಹಾಗೂ ನಾವೀನ್ಯತೆಯನ್ನು ಬೆಂಬಲಿಸಲು** ಇದನ್ನು ಸ್ಥಾಪಿಸಲಾಗಿದೆ.
- **ರಾಷ್ಟ್ರೀಯ ಪವನ ಶಕ್ತಿ ಕಾರ್ಯಯೋಜನೆ:-**
    - ಉದ್ದೇಶ:- ಇದು ಭಾರತದಲ್ಲಿ ಪವನ ಶಕ್ತಿಯ **ಅಭಿವೃದ್ಧಿ ಮತ್ತು ವಿಸ್ತರಣೆಯ** ಮೇಲೆ ಗಮನಹರಿಸುತ್ತದೆ.

- ಗುರಿ:- **2030 ರ ವೇಳೆಗೆ 140 GW** ಪವನ ಶಕ್ತಿ ಸಾಮರ್ಥ್ಯವನ್ನು ತಲುಪುವ ಗುರಿಯನ್ನು ನಿಗದಿಪಡಿಸಲಾಗಿದೆ.

- **ಪಿಎಂ-ಕುಸುಮ್ ಯೋಜನೆ:-**
  - ಉದ್ದೇಶ:- **ಕೃಷಿ ಪಂಪ್‌ಸೆಟ್‌ಗಳನ್ನು ಸೌರಶಕ್ತಿ ಚಾಲಿತವಾಗಿಸಲು** ಈ ಯೋಜನೆಯನ್ನು ರೂಪಿಸಲಾಗಿದೆ.
- **ಪರಿಷ್ಕೃತ ವಿತರಣಾ ವಲಯ ಯೋಜನೆ (RDSS):-**
  - ಉದ್ದೇಶ:- **ವಿದ್ಯುತ್ ವಿತರಣಾ ಕಂಪನಿಗಳನ್ನು (DISCOMs) ಬಲಪಡಿಸಲು** ಇದನ್ನು ಜಾರಿಗೆ ತರಲಾಗಿದೆ.

## ಬ್ರಿಕ್ಸ್ ಪ್ಲಸ್ ನೌಕಾಭ್ಯಾಸ

(ಸಾಮಾನ್ಯ ಅಧ್ಯಯನ-2/ ಅಂತರರಾಷ್ಟ್ರೀಯ ಸಂಬಂಧಗಳು)

**ಇದೀಗ ಸುದ್ದಿಯಲ್ಲಿದೆ:**

- ಪ್ರಸಕ್ತ ವರ್ಷ **ಭಾರತವು ಬ್ರಿಕ್ಸ್ ಒಕ್ಕೂಟದ ಅಧ್ಯಕ್ಷತೆಯನ್ನು** ವಹಿಸಿದ್ದರೂ ಸಹ, **ದಕ್ಷಿಣ ಆಫ್ರಿಕಾ ಆಯೋಜಿಸಿದ "ವಿಲ್ ಫಾರ್ ಪೀಸ್, 2026"** ಎಂಬ ಬ್ರಿಕ್ಸ್ ಪ್ಲಸ್ ನೌಕಾಭ್ಯಾಸದಿಂದ ಹೊರಗುಳಿಯಲು ನಿರ್ಧರಿಸಿದೆ.
- ಇಂತಹ ನೌಕಾಭ್ಯಾಸಗಳು **ಬ್ರಿಕ್ಸ್‌ನ ಸಾಂಸ್ಥಿಕ ಚಟುವಟಿಕೆಗಳಲ್ಲ**; ಬದಲಿಗೆ ಇವು ಕೇವಲ **ಸಾಂದರ್ಭಿಕ** ಅಥವಾ **ತಾತ್ಕಾಲಿಕ ಉಪಕ್ರಮಗಳಾಗಿವೆ.** ಆದ್ದರಿಂದ, ಇದರಲ್ಲಿ ಭಾಗವಹಿಸುವುದು ಕಡ್ಡಾಯವೇನಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ.

**ಬ್ರಿಕ್ಸ್ ಪ್ಲಸ್ ನೌಕಾಭ್ಯಾಸಗಳು:**

- **ತಾತ್ಕಾಲಿಕ ನೌಕಾಭ್ಯಾಸದಲ್ಲಿ ಒಳಗೊಂಡಿರುವ ರಾಷ್ಟ್ರಗಳು:-** **ಬ್ರಿಕ್ಸ್ ಸದಸ್ಯ ರಾಷ್ಟ್ರಗಳು** ಮತ್ತು **ಆಯ್ಕೆಮಾಡಿದ ಬ್ರಿಕ್ಸ್-ಯೇತರ ಪಾಲುದಾರ ರಾಷ್ಟ್ರಗಳನ್ನು** ಒಳಗೊಂಡಿರುವ ಒಂದು ತಾತ್ಕಾಲಿಕ ಕಡಲ ಸಮರಾಭ್ಯಾಸವಾಗಿದೆ.
- **ಬ್ರಿಕ್ಸ್ ಚೌಕಟ್ಟಿನ ಅಡಿಯಲ್ಲಿ ಕಡ್ಡಾಯವಾಗಿ ಇಲ್ಲ:-** ಮತ್ತು ಇವು **ಅಧಿಕೃತ ಬ್ರಿಕ್ಸ್ ಕಾರ್ಯವಿಧಾನಗಳ ಭಾಗವಾಗಿಲ್ಲ.**
- **ಚೀನಾ ನೇತೃತ್ವ:-** ಈ ನೌಕಾಭ್ಯಾಸವು **ರಷ್ಯಾ, ಇರಾನ್, ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಮತ್ತು ದಕ್ಷಿಣ ಆಫ್ರಿಕಾ** ದೇಶಗಳ ಸಕ್ರಿಯವಾಗಿ ಭಾಗವಹಿಸುವಿಕೆಯನ್ನು ಒಳಗೊಂಡಿದೆ.

**ಬ್ರಿಕ್ಸ್ (BRICS) ಸಂಘಟನೆಯ ಬಗ್ಗೆ:**

- ಸ್ಥಾಪನೆ:- **2009.**
- ಪ್ರಧಾನ ಕಚೇರಿ:- **ಶಾಂಘೈ.**
- **BRICS - ವಿಶ್ವದ ಪ್ರಮುಖ ಉದಯೋನ್ಮುಖ ಆರ್ಥಿಕತೆಗಳ ಸಂಕ್ಷಿಪ್ತ ರೂಪ:-** **ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ** (2010 ರಲ್ಲಿ ಸೇರ್ಪಡೆಯಾಯಿತು) ರಾಷ್ಟ್ರಗಳನ್ನು ಸೂಚಿಸುವ ಸಂಕ್ಷಿಪ್ತ ರೂಪವಾಗಿದೆ.
- **ಬ್ರಿಟಿಷ್ ಅರ್ಥಶಾಸ್ತ್ರಜ್ಞ ಜಿಮ್ ಓ'ನೀಲ್, 2001 ರಲ್ಲಿ "BRIC" ಎಂಬ ಪದವನ್ನು ಪರಿಚಯಿಸಿದರು:-** ಇದು **ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾ** ಎಂಬ ನಾಲ್ಕು ಉದಯೋನ್ಮುಖ ಆರ್ಥಿಕತೆಗಳನ್ನು ಒಳಗೊಂಡಿದೆ.
- ಸದಸ್ಯ ರಾಷ್ಟ್ರಗಳು:-
  - 5 ಮೂಲ ಸದಸ್ಯ ರಾಷ್ಟ್ರಗಳು:- ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ
  - 2024-25 ರ 6 ಹೊಸ ಸದಸ್ಯ ರಾಷ್ಟ್ರಗಳು:- **ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್.**




- ಬ್ರಿಕ್ಸ್ ಪಾಲು:- ಬ್ರಿಕ್ಸ್ **5 ಅತ್ಯಂತ ದೊಡ್ಡ ಅಭಿವೃದ್ಧಿಶೀಲ ರಾಷ್ಟ್ರಗಳನ್ನು** ಒಳಗೊಂಡಿದೆ. ಇದು,
  1. ಜಾಗತಿಕ ಜನಸಂಖ್ಯೆಯ 41%,
  2. ಜಾಗತಿಕ ಜಿಡಿಪಿಯ 24%
  3. ಜಾಗತಿಕ ವ್ಯಾಪಾರದ 16% ರಷ್ಟನ್ನು ಪ್ರತಿನಿಧಿಸುತ್ತದೆ.

> **ಸೂಚನೆ:- 2028 ರ ವೇಳೆಗೆ,** ಬ್ರಿಕ್ಸ್ ಜಾಗತಿಕ ಆರ್ಥಿಕತೆಯ **35% ಪಾಲನ್ನು** ಹೊಂದುವ ನಿರೀಕ್ಷೆಯಿದೆ.

- **ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್** (ನೂತನ ಅಭಿವೃದ್ಧಿ ಬ್ಯಾಂಕ್):- **ಮೂಲಸೌಕರ್ಯ ಮತ್ತು ಸುಸ್ಥಿರ ಯೋಜನೆಗಳನ್ನು** ಬೆಂಬಲಿಸಲು, ಈ ಗುಂಪಿನ ಪ್ರಾಥಮಿಕ

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

## ಭಾರತದ ಮೊಟ್ಟಮೊದಲ ಮುಕ್ತ - ಸಮುದ್ರ ಕಡಲ ಮೀನು ಸಾಕಾಣಿಕೆ ಯೋಜನೆ

(ಸಾಮಾನ್ಯ ಅಧ್ಯಯನ-3/ಜಲಚರ ಸಾಕಣೆ)

**ಇದೀಗ ಸುದ್ದಿಯಲ್ಲಿದೆ:**

- ಭಾರತ ಸರ್ಕಾರವು **ಅಂಡಮಾನ್ ಸಮುದ್ರದಿಂದ, ಭಾರತದ** ಮೊಟ್ಟಮೊದಲ 'ಮುಕ್ತ ಸಮುದ್ರ ಕಡಲ ಮೀನು ಸಾಕಾಣಿಕೆ ಯೋಜನೆ'ಗೆ ಚಾಲನೆ ನೀಡಿದೆ.

**ಮುಕ್ತ - ಸಮುದ್ರ ಕಡಲ ಮೀನು ಸಾಕಾಣಿಕೆ ಯೋಜನೆಯ ಬಗ್ಗೆ:**

- ಅನುಷ್ಠಾನ:- **ಭೂ ವಿಜ್ಞಾನ ಸಚಿವಾಲಯ, ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆ** (NIOT) ಮತ್ತು **ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳ** ಸಹಯೋಗದೊಂದಿಗೆ ಜಾರಿಯಾಗುತ್ತಿದೆ.
- ಗುರಿ:- **ಸಮುದ್ರಾಹಾರ ಉತ್ಪಾದನೆಯನ್ನು ಹೆಚ್ಚಿಸುವುದು** ಮತ್ತು **ಕರಾವಳಿ ಮೀನುಗಾರಿಕೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು.**
- ಉದ್ದೇಶ:- ಈ ಪ್ರಾಯೋಗಿಕ ಉಪಕ್ರಮವು ನೈಸರ್ಗಿಕ ಸಾಗರ ಪರಿಸ್ಥಿತಿಗಳಲ್ಲಿ ಕಡಲ **ತುಡುಪ್ಪದ ಮೀನು** (ಫಿನ್‌ಫಿಶ್) ಮತ್ತು **ಸಮುದ್ರ ಶೈವಲ/ ಕಳೆಯ** ಮುಕ್ತ ಸಮುದ್ರ ಕೃಷಿಯ ಮೇಲೆ ಕೇಂದ್ರೀಕರಿಸುತ್ತದೆ. ಇದು ವೈಜ್ಞಾನಿಕ ಆವಿಷ್ಕಾರವನ್ನು ಜೀವನೋಪಾಯದ ಸೃಷ್ಟಿಯೊಂದಿಗೆ ಸಂಯೋಜಿಸುತ್ತದೆ.

**ಮುಕ್ತ ಸಮುದ್ರ ಮೀನು ಸಾಕಾಣಿಕೆಯ ಬಗ್ಗೆ:**

- ವ್ಯಾಖ್ಯಾನ:- ಇದು **ಕರಾವಳಿಯಿಂದ ದೂರದಲ್ಲಿರುವ (ಕಡಲಾಚೆಯ) ತೆರೆದ ಸಮುದ್ರದ ನೀರಿನಲ್ಲಿ ಕಡಲ ಮೀನಿನ ಪ್ರಭೇದಗಳ ಸಾಕಣೆಯನ್ನು** ಸೂಚಿಸುತ್ತದೆ.
- ಎತ್ತರದ ಅಲೆಗಳು, ಪ್ರವಾಹಗಳು ಮತ್ತು ಗಾಳಿಯ ಪರಿಸ್ಥಿತಿಗಳನ್ನು ತಡೆದುಕೊಳ್ಳುವಂತೆ ವಿನ್ಯಾಸಗೊಳಿಸಲಾದ **ಪಂಜರಗಳು** ಅಥವಾ **ನೀರಿನಲ್ಲಿ ಮುಳುಗಿಸಬಹುದಾದ ವ್ಯವಸ್ಥೆಗಳನ್ನು** ಬಳಸಿಕೊಂಡು ಸಾಕಣೆಯನ್ನು ಮಾಡಲಾಗುತ್ತದೆ.
- ಮಹತ್ವ:- **ಸುಸ್ಥಿರ ಮೀನುಗಾರಿಕೆ, ಜೀವನೋಪಾಯದ ಭದ್ರತೆ ಮತ್ತು ನೀಲಿ ಆರ್ಥಿಕತೆಯ ವಿಸ್ತರಣೆಗೆ** ಗಮನಾರ್ಹ ಸಾಮರ್ಥ್ಯವನ್ನು ಹೊಂದಿದೆ.

## ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಗೆ (ECOSOC) 80 ವರ್ಷಗಳು

(ಸಾಮಾನ್ಯ ಅಧ್ಯಯನ-2/ ಅಂತರರಾಷ್ಟ್ರೀಯ ಗುಂಪುಗಳು)

**ಇದೀಗ ಸುದ್ದಿಯಲ್ಲಿದೆ:**

- ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯು (ECOSOC) ತನ್ನ ಕಾರ್ಯಚಟುವಟಿಕೆಯ ೮೦ ವರ್ಷಗಳನ್ನು ಪೂರೈಸಿದೆ.

**ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿ (ECOSOC)ಯ ಬಗ್ಗೆ:**

- **ವಿಶ್ವಸಂಸ್ಥೆಯ 6 ಪ್ರಮುಖ ಅಂಗಗಳಲ್ಲಿ ಒಂದು:-** ಮತ್ತು ಅಂತರರಾಷ್ಟ್ರೀಯ **ಆರ್ಥಿಕ, ಸಾಮಾಜಿಕ ಹಾಗೂ ಪರಿಸರ ನೀತಿ ಸಂಯೋಜನೆಗೆ ಕೇಂದ್ರ ವೇದಿಕೆಯಾಗಿ** ಕಾರ್ಯನಿರ್ವಹಿಸುತ್ತದೆ.
- ಸ್ಥಾಪನೆ:- **ವಿಶ್ವಸಂಸ್ಥೆಯ ಘೋಷಣಾಪತ್ರದ** ಅಡಿಯಲ್ಲಿ **1945 ರಲ್ಲಿ** ಸ್ಥಾಪಿಸಲಾಯಿತು.

## ಗ್ರೀನ್‌ಲ್ಯಾಂಡ್ ಮೇಲಿನ ಸುಂಕದ ಬೆದರಿಕೆ: ಐರೋಪ್ಯ ಒಕ್ಕೂಟದ (EU) ವ್ಯಾಪಾರ ಒಪ್ಪಂದಕ್ಕೆ ಅಪಾಯ

(ಸಾಮಾನ್ಯ ಅಧ್ಯಯನ-2/ ಅಂತರರಾಷ್ಟ್ರೀಯ ಸಂಬಂಧಗಳು)




**ಇದೀಗ ಸುದ್ದಿಯಲ್ಲಿದೆ:**

- ಗ್ರೀನ್‌ಲ್ಯಾಂಡ್‌ನ ಸಾರ್ವಭೌಮತ್ವವನ್ನು ಬೆಂಬಲಿಸುವ ದೇಶಗಳ ಮೇಲೆ ಆಮದು ಸುಂಕ ವಿಧಿಸುವುದಾಗಿ **ಅಮೆರಿಕ** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ ಬೆನ್ನಲ್ಲೇ,

INSTAKAS

ಐರೋಪ್ಯ ಒಕ್ಕೂಟದ ಸಂಸದರು EU-US ವ್ಯಾಪಾರ ಒಪ್ಪಂದದ ಅನುಮೋದನೆಯನ್ನು ವಿಳಂಬಗೊಳಿಸಲು ಅಥವಾ ತಡೆಯಲು ಮುಂದಾಗಿದ್ದಾರೆ.

**'ಗ್ರೀನ್‌ಲ್ಯಾಂಡ್'ನ ಬಗ್ಗೆ:**

- **ಉತ್ತರಾರ್ಧ ಗೋಳದಲ್ಲಿದೆ:-** ಇದರ ಸುತ್ತಲೂ,
    1. ಉತ್ತರದಲ್ಲಿ **ಆರ್ಕ್ಟಿಕ್ ಮಹಾಸಾಗರ,**
    2. ದಕ್ಷಿಣದಲ್ಲಿ ಉತ್ತರ **ಅಟ್ಲಾಂಟಿಕ್ ಮಹಾಸಾಗರ,**
    3. ಪಶ್ಚಿಮದಲ್ಲಿ **ಬ್ಯಾಫಿನ್ ಕೊಲ್ಲಿ** ಮತ್ತು
    4. ಪೂರ್ವದಲ್ಲಿ **ಗ್ರೀನ್‌ಲ್ಯಾಂಡ್ ಸಮುದ್ರಗಳಿವೆ.**
- ಇದು ಭೌಗೋಳಿಕವಾಗಿ **ಉತ್ತರ ಅಮೆರಿಕಕ್ಕೆ** ಹತ್ತಿರವಾಗಿದ್ದರೂ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ **ಡೆನ್ಮಾರ್ಕ್** ದೇಶದೊಂದಿಗೆ ನಿಕಟ ಸಂಬಂಧ ಹೊಂದಿದೆ.
- **ಸಂಪನ್ಮೂಲಗಳು:-** ಇದು ಹೇರಳವಾಗಿ ಖನಿಜ ಸಂಪತ್ತನ್ನು ಹೊಂದಿರುವ ಪ್ರದೇಶವಾಗಿದ್ದು, ಇಲ್ಲಿ **ಚಿನ್ನ, ನಿಕಲ್ ಮತ್ತು ಕೋಬಾಲ್ಟ್‌ಗಳ** ದೊಡ್ಡ ನಿಕ್ಷೇಪಗಳಿವೆ.
- **ವಿರಳ ಭೂ ಧಾತುಗಳು:-** **ಡಿಸ್ಪ್ರೋಸಿಯಮ್, ಪ್ರಸಿಯೋಡೈಮಿಯಮ್, ನಿಯೋಡೈಮಿಯಮ್ ಮತ್ತು ಟೆರ್ಬಿಯಮ್‌ಗಳಂತಹ** ಅತಿದೊಡ್ಡ ನಿಕ್ಷೇಪಗಳನ್ನು ಸಹ ಇದು ಹೊಂದಿದೆ.
- **1979 ರಲ್ಲಿ ಸ್ವಾಯತ್ತ ಆಡಳಿತ:-** ಗ್ರೀನ್‌ಲ್ಯಾಂಡ್ 1979 ರಲ್ಲಿ ಸ್ವಾಯತ್ತ ಆಡಳಿತವನ್ನು ಪಡೆಯಿತು ಮತ್ತು **2009 ರಲ್ಲಿ ಸ್ವ-ಆಡಳಿತದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು.** ಇದು ಆರೋಗ್ಯ ಮತ್ತು ಶಿಕ್ಷಣದಂತಹ ದೇಶೀಯ ವ್ಯವಹಾರಗಳ ಮೇಲೆ ಗ್ರೀನ್‌ಲ್ಯಾಂಡ್‌ಗೆ ಅಧಿಕಾರವನ್ನು ನೀಡಿತು.
- ಆದರೆ, **ಡೆನ್ಮಾರ್ಕ್ - ರಕ್ಷಣೆ, ವಿದೇಶಾಂಗ ನೀತಿ ಮತ್ತು ಹಣಕಾಸು ನೀತಿಯ** ಮೇಲೆ ತನ್ನ ನಿಯಂತ್ರಣವನ್ನು ಉಳಿಸಿಕೊಂಡಿದೆ.

**ಗ್ರೀನ್‌ಲ್ಯಾಂಡ್ ಮೇಲೆ ಪ್ರಮುಖ ದೇಶಗಳ ದೃಷ್ಟಿ:**

- **ಡೆನ್ಮಾರ್ಕ್‌ನ ಸದಸ್ಯತ್ವದ ಮೂಲಕ NATO ದ ಭಾಗವಾಗಿದೆ:-** ಗ್ರೀನ್‌ಲ್ಯಾಂಡ್, **'ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಸ್ಥೆ'ಯ** (NATO) ಭಾಗವಾಗಿದೆ.
    1. **ಅಮೆರಿಕಾಕ್ಕೆ ಕಾರ್ಯತಂತ್ರದ ಮಹತ್ವ:-** ಯುರೋಪ್‌ನಿಂದ ಉತ್ತರ ಅಮೆರಿಕಕ್ಕೆ ಸಾಗುವ **ಅತ್ಯಂತ ಚಿಕ್ಕ ಮಾರ್ಗವು** ಈ ಆರ್ಕ್ಟಿಕ್ ದ್ವೀಪದ ಮೂಲಕ ಹಾದುಹೋಗುವುದರಿಂದ, **ಅಮೆರಿಕದ ಸೇನೆ ಮತ್ತು ಅದರ 'ಬ್ಯಾಲಿಸ್ಟಿಕ್ ಕ್ಷಿಪಣಿ ಮುನ್ಸೂಚನೆ ವ್ಯವಸ್ಥೆ'ಗೆ** ಇದು ಕಾರ್ಯತಂತ್ರದ ಮಹತ್ವವನ್ನು ಹೊಂದಿದೆ.
- **ಅಪರೂಪದ ಖನಿಜ ಸಂಪನ್ಮೂಲಗಳ ಮೇಲೆ ಚೀನಾದ ಆಸಕ್ತಿ:-** ಗ್ರೀನ್‌ಲ್ಯಾಂಡ್‌ನ ಅಪರೂಪದ ಖನಿಜ ಸಂಪನ್ಮೂಲಗಳು ಮತ್ತು ಅಲ್ಲಿನ ಮೂಲಸೌಕರ್ಯ ಯೋಜನೆಗಳಲ್ಲಿ ಚೀನಾ ತೀವ್ರ ಆಸಕ್ತಿಯನ್ನು ತೋರಿದೆ.

## ಹಸಿರು ಅಲ್ಯೂಮಿನಿಯಂ

(ಸಾಮಾನ್ಯ ಅಧ್ಯಯ-ನ3/ಆರ್ಥಿಕತೆ/ಪರಿಸರ)

**ಇದೀಗ ಸುದ್ದಿಯಲ್ಲಿದೆ:**

- **ಹೆಚ್ಚಿನ ವಿದ್ಯುತ್ ವೆಚ್ಚಗಳು ಮತ್ತು ಉಷ್ಣ ವಿದ್ಯುತ್** ಮೇಲಿನ ಅವಲಂಬನೆಯಿಂದಾಗಿ, **ಐರೋಪ್ಯ ಒಕ್ಕೂಟದ 'ಸಿಬಿಎಎಂ' (CBAM)** ಮಾನದಂಡದ ಅಡಿಯಲ್ಲಿ ಹಸಿರು ಅಲ್ಯೂಮಿನಿಯಂ ಉತ್ಪಾದನೆಗೆ, ಭಾರತದ ಅಲ್ಯೂಮಿನಿಯಂ ವಲಯವು ಇನ್ನೂ ಸಿದ್ಧವಾಗಿಲ್ಲ ಎಂದು **'ನಾಲ್ಕೋ' (NALCO) ಸಂಸ್ಥೆಯ** ಅಧಿಕಾರಿಗಳು ಹೇಳಿದ್ದಾರೆ.

**ಹಸಿರು ಅಲ್ಯೂಮಿನಿಯಂ ನ ಬಗ್ಗೆ:**

- **ವ್ಯಾಖ್ಯಾನ:-** ಇದು **ಹಸಿರುಮನೆ ಅನಿಲ ಹೊರಸೂಸುವಿಕೆ ಮತ್ತು ಪರಿಸರದ ಮೇಲಿನ ದುಷ್ಪರಿಣಾಮವನ್ನು ಕಡಿಮೆ ಮಾಡುವ ವಿಧಾನಗಳನ್ನು ಬಳಸಿಕೊಂಡು ಉತ್ಪಾದಿಸಲಾದ ಅಲ್ಯೂಮಿನಿಯಂ** ಅನ್ನು ಸೂಚಿಸುತ್ತದೆ.
- ಸಾಂಪ್ರದಾಯಿಕ ಅಲ್ಯೂಮಿನಿಯಂ ಉತ್ಪಾದನೆಯು ಅಧಿಕ ಶಕ್ತಿಯನ್ನು ಬಳಸುವ ಪ್ರಕ್ರಿಯೆಯಾಗಿದ್ದು, ಪಳೆಯುಳಿಕೆ ಇಂಧನಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ.
- ಹಸಿರು ಅಲ್ಯೂಮಿನಿಯಂ ಅನ್ನು **ನವೀಕರಿಸಬಹುದಾದ ಇಂಧನ ಮೂಲಗಳು, ಮರುಬಳಕೆಯ ವಸ್ತುಗಳು ಮತ್ತು ನವೀನ ತಂತ್ರಜ್ಞಾನಗಳನ್ನು** ಬಳಸಿಕೊಂಡು ಉತ್ಪಾದಿಸಲಾಗುತ್ತದೆ.
- **ಪರಿಸರದ ಹೆಜ್ಜೆಗುರುತು:-** ಇದು ಪರಿಸರದ ಮೇಲಿನ ಹಾನಿಕಾರಕ ದುಷ್ಪರಿಣಾಮವನ್ನು ತಗ್ಗಿಸುತ್ತದೆ.

**ಹಸಿರು ಅಲ್ಯೂಮಿನಿಯಂನ ಮಹತ್ವ:**

- **ಇಂಗಾಲದ ಹೊರಸೂಸುವಿಕೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ:-** ಮರುಬಳಕೆಯ ಮೂಲಕ ಶಕ್ತಿಯನ್ನು ಉಳಿಸುತ್ತದೆ ಮತ್ತು ತ್ಯಾಜ್ಯವನ್ನು ಕಡಿಮೆ ಮಾಡುವ ಮೂಲಕ 'ವೃತ್ತಾಕಾರದ ಆರ್ಥಿಕತೆಯನ್ನು' ಬೆಂಬಲಿಸುತ್ತದೆ.
- **ಕಾರ್ಪೋರೇಟ್ ಸುಸ್ಥಿರತೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ:-** ಅಲ್ಯೂಮಿನಿಯಂನ ಕಾರ್ಯಕ್ಷಮತೆಗೆ


ಧಕ್ಕೆಯಾಗದಂತೆ, ಅದರ ಪ್ರಮುಖ ಗುಣಗಳಾದ ಹಗುರವಾದ ತೂಕ, ಬಾಳಿಕೆ, ತುಕ್ಕು-ನಿರೋಧಕತೆ ಮತ್ತು ಬಹುಮುಖತೆಯನ್ನು ಉಳಿಸಿಕೊಳ್ಳುವ ಮೂಲಕ, ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ.

**ನಿಮಗಿದು ತಿಳಿದಿದೆಯೇ?**

- **2ನೇ ಅತಿದೊಡ್ಡ ಅಲ್ಯೂಮಿನಿಯಂ ಉತ್ಪಾದಕ ರಾಷ್ಟ್ರ:-** ಚೀನಾದ ನಂತರ ಭಾರತವು ವಿಶ್ವದ 2ನೇ ಅತಿದೊಡ್ಡ ಅಲ್ಯೂಮಿನಿಯಂ ಉತ್ಪಾದಕ ರಾಷ್ಟ್ರವಾಗಿದೆ ಮತ್ತು ಸಂಸ್ಕರಿಸಿದ ತಾಮ್ರದ ಉತ್ಪಾದನೆಯಲ್ಲಿ ಅಗ್ರ-10 ದೇಶಗಳಲ್ಲಿ ಒಂದಾಗಿದೆ.
- **ಅಲ್ಯೂಮಿನಿಯಂನ ಉಪಯೋಗಗಳು:-** **ವಿದ್ಯುತ್, ಸಾರಿಗೆ, ನಿರ್ಮಾಣ, ಪ್ಯಾಕೇಜಿಂಗ್, ಯಂತ್ರೋಪಕರಣಗಳು, ಅಂತರಿಕ್ಷಯಾನ (ಏರೋಸ್ಪೇಸ್) ಮತ್ತು ಗ್ರಾಹಕ ಸರಕುಗಳಲ್ಲಿ** ವ್ಯಾಪಕವಾಗಿ ಬಳಸಲಾಗುತ್ತದೆ. ವಿಶೇಷವಾಗಿ **ಆಟೋಮೊಬೈಲ್, ವಸತಿ, ಸೌರ ಶಕ್ತಿ ಮತ್ತು ವಿದ್ಯುತ್ ಪ್ರಸರಣ ವಲಯಗಳಲ್ಲಿ** ಇದರ ಬೇಡಿಕೆ ಹೆಚ್ಚುತ್ತಿದೆ.

## ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಸಂಪರ್ಕ ಪಥ (IMEC)

(ಸಾಮಾನ್ಯ ಅಧ್ಯಯನ-2/ ಅಂತರರಾಷ್ಟ್ರೀಯ ಸಂಬಂಧಗಳು)




**ಇದೀಗ ಸುದ್ದಿಯಲ್ಲಿದೆ:**

- **ಅಮೆರಿಕದ ಪ್ರಸ್ತುತ 'ಪಾರಸ್ಪರಿಕ ಸುಂಕ ನೀತಿಗಳು' ಮತ್ತು ರಕ್ಷಣಾತ್ಮಕ ಕ್ರಮಗಳು,** 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಸಂಪರ್ಕ ಪಥ' (IMEC) ನಂತಹ ಬಹು-ರಾಷ್ಟ್ರ, ಬಹು-ಮಾದರಿ ಸಾರಿಗೆ ಮತ್ತು ವ್ಯಾಪಾರ ಸಂಪರ್ಕ ಪಥದ ಅಭಿವೃದ್ಧಿಗೆ ಒಂದು ಕಳವಳಕಾರಿ ಸೂಚನೆಯಾಗಿದ್ದು, ಪ್ರತಿಕೂಲ ಪರಿಣಾಮ ಬೀರಬಹುದು.

**ಭಾರತ-ಮಧ್ಯಪ್ರಾಚ್ಯ-ಇಯು ಆರ್ಥಿಕ ಸಂಪರ್ಕ ಪಥ (IMEC)ದ ಬಗ್ಗೆ:**

- **ಜಿ-20 ಶೃಂಗಸಭೆ, 2023ರ ಸಂದರ್ಭದಲ್ಲಿ ಘೋಷಿಸಲಾಯಿತು:-** IMEC **4,800 ಕಿ.ಮೀ** ಉದ್ದದ ಯೋಜಿತ ಮಾರ್ಗವಾಗಿದೆ.
- ಸದಸ್ಯರು:- **ಭಾರತ, ಐರೋಪ್ಯ ಒಕ್ಕೂಟ, ಫ್ರಾನ್ಸ್, ಜರ್ಮನಿ, ಇಟಲಿ, ಸೌದಿ ಅರೇಬಿಯಾ, ಯುಎಇ ಮತ್ತು ಅಮೆರಿಕ.**
- ಗುರಿ:- **ಏಷ್ಯಾ, ಯುರೋಪ್ ಮತ್ತು ಮಧ್ಯಪ್ರಾಚ್ಯ ಪ್ರದೇಶಗಳ ಏಕೀಕರಣ.**
- IMEC 2 ಪ್ರತ್ಯೇಕ ಸಂಪರ್ಕ ಪಥಗಳನ್ನು ಒಳಗೊಂಡಿದೆ:-
  1. **ಪೂರ್ವ ಸಂಪರ್ಕ ಪಥ:-** **ಭಾರತವನ್ನು ಪಶ್ಚಿಮ ಏಷ್ಯಾ/ಮಧ್ಯಪ್ರಾಚ್ಯದೊಂದಿಗೆ** ಸಂಪರ್ಕಿಸುತ್ತದೆ.
  2. **ಉತ್ತರ ಸಂಪರ್ಕ ಪಥ:-** **ಪಶ್ಚಿಮ ಏಷ್ಯಾ/ಮಧ್ಯಪ್ರಾಚ್ಯವನ್ನು ಯುರೋಪ್‌ನೊಂದಿಗೆ** ಸಂಪರ್ಕಿಸುತ್ತದೆ.

**ಭಾರತಕ್ಕೆ IMEC ಯ ಪ್ರಸ್ತುತತೆ ಮತ್ತು ಸಂಚಾರ ಅಡೆತಡೆಗಳು:**

- **ಸೂಯೆಜ್ ಕಾಲುವೆ ತಡೆ (2021):-** ಬೃಹತ್ ಸರಕು ಸಾಗಣೆ ಹಡಗೊಂದು ಅಡ್ಡಲಾಗಿ ನಿಂತು ಈ ಮಾರ್ಗವನ್ನು ನಿರ್ಬಂಧಿಸಿದ್ದರಿಂದ, ಹಲವಾರು ಹಡಗುಗಳು ಸಿಕ್ಕಿಹಾಕಿಕೊಂಡಿದ್ದವು. ಒಂದು ದೊಡ್ಡ ರಕ್ಷಣಾ ಕಾರ್ಯಾಚರಣೆಯ ಮೂಲಕ ಅದನ್ನು ತೆರವುಗೊಳಿಸುವವರೆಗೂ, ಈ ಅಡಚಣೆಯು ಜಾಗತಿಕ ವ್ಯಾಪಾರದ ಸುಮಾರು **12% ಮೇಲೆ ಪರಿಣಾಮ ಬೀರಿತು.**
- **ಕೆಂಪು ಸಮುದ್ರದ ಬಿಕ್ಕಟ್ಟು (2023-24):-** **ಹೌತಿ ಬಂಡುಕೋರರು ವಾಣಿಜ್ಯ ಹಡಗುಗಳ ಮೇಲೆ ದಾಳಿ** ನಡೆಸಿದ್ದರಿಂದ ಈ ಬಿಕ್ಕಟ್ಟು ಉಂಟಾಯಿತು. ಇದು ಒಂದೇ ವ್ಯಾಪಾರ ಮಾರ್ಗದ ಮೇಲೆ ಅತಿಯಾಗಿ ಅವಲಂಬಿತವಾಗಿರುವುದರ ದುರ್ಬಲತೆಯನ್ನು ಬಹಿರಂಗಪಡಿಸಿತು. ಕೆಂಪು ಸಮುದ್ರದ ಮೂಲಕ ಸಾಗುತ್ತಿದ್ದ ಭಾರತದ ಸರಕುಗಳಲ್ಲಿ, ಸುಮಾರು **25% ರಷ್ಟು ಸರಕು ಸಾಗಣೆಯು ವಿಳಂಬವನ್ನು** ಎದುರಿಸಿತು.

**ಭಾರತಕ್ಕೆ IMEC ಯ ಮಹತ್ವ:**

- **ಆರ್ಥಿಕ ಅಭಿವೃದ್ಧಿ:-** ಸುಧಾರಿತ ಸಂಪರ್ಕ ಮತ್ತು ಆರ್ಥಿಕ ಏಕೀಕರಣದ ಮೂಲಕ **ಏಷ್ಯಾ, ಪಶ್ಚಿಮ ಏಷ್ಯಾ, ಮಧ್ಯಪ್ರಾಚ್ಯ ಮತ್ತು ಯುರೋಪ್** ಅನ್ನು ಜೋಡಿಸಿ, ಈ ಪ್ರದೇಶಗಳಲ್ಲಿ

ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವುದು ಈ ಸಂಪರ್ಕ ಪಥದ ಗುರಿಯಾಗಿದೆ.

- **ಭಾರತದ ಸಂಪರ್ಕ ಮತ್ತು ವ್ಯಾಪಾರ ಪ್ರವೇಶದ ಹೆಚ್ಚಳ:-** **ಅರೇಬಿಯನ್ ಪರ್ಯಾಯ ದ್ವೀಪ ಮತ್ತು ಮೆಡಿಟರೇನಿಯನ್ ಸಮುದ್ರದ** ಮೂಲಕ ಭಾರತೀಯ ಬಂದರುಗಳನ್ನು ಯುರೋಪ್‌ಗೆ ಸಂಪರ್ಕಿಸುವ **ನೇರ, ವೇಗವಾದ ಮತ್ತು ಸುರಕ್ಷಿತ** ವ್ಯಾಪಾರ ಮಾರ್ಗವನ್ನು IMEC ಭಾರತಕ್ಕೆ ಒದಗಿಸುತ್ತದೆ.
- **ಸೂಯೆಜ್ ಕಾಲುವೆ ಮಾರ್ಗದ ಮೇಲಿನ ಅವಲಂಬನೆಯನ್ನು ತಗ್ಗಿಸುತ್ತದೆ:-** ಅಲ್ಲದೆ, ಸಾಗಣೆ ಸಮಯವನ್ನು **40%** ರಷ್ಟು ಮತ್ತು ವೆಚ್ಚವನ್ನು **20–30%** ರಷ್ಟು **ಕಡಿಮೆ** ಮಾಡುತ್ತದೆ.

## ಭಾರತದಲ್ಲಿ ಮಕ್ಕಳ ಕಳ್ಳಸಾಗಣೆ

(ಸಾಮಾನ್ಯ ಅಧ್ಯಯನ-2/ರಾಜ್ಯಶಾಸ್ತ್ರ ಮತ್ತು ಆಡಳಿತ)

### ಇದೀಗ ಸುದ್ದಿಯಲ್ಲಿದೆ:

- ಭಾರತದಲ್ಲಿ ಬಲವಾದ ಸಾಂವಿಧಾನಿಕ ಚೌಕಟ್ಟು ಮತ್ತು ಅನೇಕ ಶಾಸನಬದ್ಧ ರಕ್ಷಣೆಗಳಿದ್ದರೂ, ಮಕ್ಕಳ ಕಳ್ಳಸಾಗಣೆಯು ಗಂಭೀರ **ಮಾನವ ಹಕ್ಕುಗಳ ಸವಾಲಾಗಿ** ಮುಂದುವರೆದಿದ್ದು ಕಳವಳಕಾರಿ ಸಂಗತಿಯಾಗಿದೆ.

### ಭಾರತೀಯ ನ್ಯಾಯ ಸಂಹಿತೆ (BNS), 2023 ರ ಪ್ರಕಾರ ಮಕ್ಕಳ ಕಳ್ಳಸಾಗಣೆ:

- **BNS, 2023 ರ ಸೆಕ್ಷನ್ 143 'ಕಳ್ಳಸಾಗಣೆ'ಯನ್ನು ವ್ಯಾಖ್ಯಾನಿಸುತ್ತದೆ:-** **ಶೋಷಣೆಗಾಗಿ** ವ್ಯಕ್ತಿಗಳ ನೇಮಕಾತಿ, ಸಾಗಾಣಿಕೆ, ಆಶ್ರಯ ನೀಡುವಿಕೆ, ವರ್ಗಾವಣೆ ಅಥವಾ ಸ್ವೀಕೃತಿಯನ್ನು 'ಕಳ್ಳಸಾಗಣೆ' ಎಂದು ವ್ಯಾಖ್ಯಾನಿಸಲಾಗಿದೆ.
- **ಈ ವಿಧಾನಗಳನ್ನು ಕಳ್ಳಸಾಗಣೆ ಒಳಗೊಂಡಿದೆ:-** **ಬೆದರಿಕೆಗಳು, ಬಲವಂತ, ಒತ್ತಾಯ, ಅಪಹರಣ, ವಂಚನೆ, ಮೋಸ, ಅಧಿಕಾರ ದುರ್ಬಳಕೆ ಅಥವಾ ಆಮಿಷ ಒಡ್ಡುವಂತಹುದು.**
- **ಶೋಷಣೆಯ ವ್ಯಾಪ್ತಿ:-** **ದೈಹಿಕ ಮತ್ತು ಲೈಂಗಿಕ ಶೋಷಣೆ, ಗುಲಾಮಗಿರಿ, ದಾಸ್ಯ, ಬಲವಂತದ ದುಡಿಮೆ ಹಾಗೂ ಬಲವಂತವಾಗಿ ಅಂಗಾಂಗಗಳನ್ನು ತೆಗೆಯುವುದನ್ನು** ಇದು ಒಳಗೊಂಡಿದೆ.

### ಭಾರತದಲ್ಲಿ ಸಾಂವಿಧಾನಿಕ ರಕ್ಷಣೆಗಳು:

- **ವಿಧಿ 21:-** ಇದು "ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕ"ನ್ನು ಖಚಿತಪಡಿಸುತ್ತದೆ. ಇದು **ಘನತೆಯಿಂದ ಜೀವಿಸುವ ಹಕ್ಕನ್ನು** ಒಳಗೊಂಡಿದೆ ಎಂದು ಅರ್ಥೈಸಲಾಗಿದೆ.
- **ವಿಧಿ 23:-** ಇದು **ಮಾನವರ ಕಳ್ಳಸಾಗಣೆ ಮತ್ತು ಬಲವಂತದ ದುಡಿಮೆಯನ್ನು ನಿಷೇಧಿಸುತ್ತದೆ.**
- **ವಿಧಿ 24:-** ಇದು **14** ವರ್ಷದೊಳಗಿನ ಮಕ್ಕಳನ್ನು **ಅಪಾಯಕಾರಿ ಕೈಗಾರಿಕೆಗಳಲ್ಲಿ** ನೇಮಿಸಿಕೊಳ್ಳುವುದನ್ನು ನಿಷೇಧಿಸುತ್ತದೆ.
- **ವಿಧಿ 39(e):-** **ಕಾರ್ಮಿಕರ ಮತ್ತು ಮಕ್ಕಳ ಆರೋಗ್ಯ ಹಾಗೂ ಶಕ್ತಿಯನ್ನು ದುರುಪಯೋಗಪಡಿಸಿಕೊಳ್ಳದಂತೆ ಮತ್ತು ನಾಗರಿಕರು ತಮ್ಮ ವಯಸ್ಸು ಅಥವಾ ಶಕ್ತಿಗೆ ಸೂಕ್ತವಲ್ಲದ ಉದ್ಯೋಗಗಳನ್ನು ಮಾಡಲು ಒತ್ತಾಯಿಸಲ್ಪಡದಂತೆ** ರಾಜ್ಯವು ಖಚಿತಪಡಿಸಿಕೊಳ್ಳಬೇಕು.
- **ವಿಧಿ 39(f):-** **ಮಕ್ಕಳು ಸ್ವಾತಂತ್ರ್ಯ ಮತ್ತು ಘನತೆಯ ಪರಿಸ್ಥಿತಿಗಳಲ್ಲಿ ಬೆಳೆಯಲು ಅವಕಾಶಗಳನ್ನು ಕಲ್ಪಿಸಬೇಕು ಮತ್ತು ನೈತಿಕ ಹಾಗೂ ಭೌತಿಕ ಪರಿತ್ಯಾಗದಿಂದ ರಕ್ಷಣೆ ನೀಡಬೇಕು** ಎಂದು ಇದು ಆದೇಶಿಸುತ್ತದೆ.

### ಮಕ್ಕಳ ಕಳ್ಳಸಾಗಣೆ ವಿರುದ್ಧ ನ್ಯಾಯಾಂಗದ ಮಧ್ಯಸ್ಥಿಕೆ:

- **ವಿಶಾಲ್ ಜೀತ್ v/s ಭಾರತ ಒಕ್ಕೂಟ (1990):-** ಈ ಪ್ರಕರಣದಲ್ಲಿ, **ಕಳ್ಳಸಾಗಣೆ ಮತ್ತು ಮಕ್ಕಳ ವೇಶ್ಯಾವಾಟಿಕೆ ಗಂಭೀರ ಸಾಮಾಜಿಕ-ಆರ್ಥಿಕ ಸಮಸ್ಯೆಗಳಾಗಿವೆ.** ಆದ್ದರಿಂದ ಅವುಗಳನ್ನು ಎದುರಿಸಲು ತಡೆಗಟ್ಟುವ ಮತ್ತು **ಮಾನವೀಯ ವಿಧಾನ** ಅತ್ಯಗತ್ಯ ಎಂದು ಘನ ನ್ಯಾಯಾಲಯ ಹೇಳಿದೆ.
- **ಎಂ. ಸಿ. ಮೆಹ್ತಾ v/s ತಮಿಳುನಾಡು ರಾಜ್ಯ (1996):-** **ಅಪಾಯಕಾರಿ ಕೈಗಾರಿಕೆಗಳಲ್ಲಿ** ಮಕ್ಕಳನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸುವ ಉದ್ದೇಶದಿಂದ ಘನ ನ್ಯಾಯಾಲಯವು **ಮಾರ್ಗಸೂಚಿಗಳನ್ನು** ಹೊರಡಿಸಿತು.
- **ಬಚ್‌ಪನ್ ಬಚಾವೋ ಆಂದೋಲನ್ v/s ಭಾರತ ಒಕ್ಕೂಟ (2011):-** **ಮಕ್ಕಳ ವ್ಯಾಪಕ ಶೋಷಣೆ ಮತ್ತು ಕಳ್ಳಸಾಗಣೆಯನ್ನು ಪರಿಹರಿಸಲು** ಸರ್ವೋಚ್ಚ ನ್ಯಾಯಾಲಯ ನಿರ್ದೇಶನಗಳನ್ನು ನೀಡಿತು.
- **ಕೆ. ಪಿ. ಕಿರಣ್ ಕುಮಾರ v/s ಕರ್ನಾಟಕ ರಾಜ್ಯ:-** ಸರ್ವೋಚ್ಚ ನ್ಯಾಯಾಲಯವು ಅಂತಹ ಅಪರಾಧಗಳನ್ನು ತಡೆಗಟ್ಟಲು **ಕಠಿಣ ಮಾರ್ಗಸೂಚಿಗಳನ್ನು** ನೀಡಿದೆ. ಕಳ್ಳಸಾಗಣೆಯು ಸಂವಿಧಾನವು ಖಾತರಿಪಡಿಸಿದ ಮಕ್ಕಳ **ಜೀವಿಸುವ ಮೂಲಭೂತ ಹಕ್ಕನ್ನು** ಉಲ್ಲಂಘಿಸುತ್ತದೆ ಎಂದು ಹೇಳಿದೆ.

### ಮಾನವ ಕಳ್ಳಸಾಗಣೆ ವಿರೋಧಿ ಅಪರಾಧಗಳನ್ನು ನಿಯಂತ್ರಿಸುವ ಕಾನೂನುಗಳು:

- **ಅನೈತಿಕ ಕಳ್ಳಸಾಗಣೆ (ತಡೆಗಟ್ಟುವಿಕೆ) ಕಾಯ್ದೆ, 1956:-** ಇದು ಅನೈತಿಕ ಕಳ್ಳಸಾಗಣೆ ಮತ್ತು ಲೈಂಗಿಕ ಕೆಲಸವನ್ನು

ತಡೆಯುವ ಗುರಿಯನ್ನು ಹೊಂದಿದೆ. ಇದು 1978 ಮತ್ತು 1986 ರಲ್ಲಿ ಎರಡು ತಿದ್ದುಪಡಿಗಳಿಗೆ ಒಳಪಟ್ಟಿದೆ.

- **ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986:-** ಇದು ಮಕ್ಕಳನ್ನು ಕೆಲವು ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳದಂತೆ ತಡೆಯುತ್ತದೆ ಮತ್ತು ಇತರ ಕ್ಷೇತ್ರಗಳಲ್ಲಿ ಮಕ್ಕಳ ಕೆಲಸದ ಪರಿಸ್ಥಿತಿಗಳನ್ನು ನಿಯಂತ್ರಿಸುತ್ತದೆ.
- **ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976:- ಸಾಲ ತೀರಿಸಲು ಮಕ್ಕಳು ಸೇರಿದಂತೆ ಜನರು ದಾಸ್ಯದ ಪರಿಸ್ಥಿತಿಗಳಲ್ಲಿ** ಕೆಲಸ ಮಾಡುವ ಪದ್ಧತಿಯನ್ನು ಇದು ನಿಷೇಧಿಸುತ್ತದೆ. ಜೀತಪದ್ಧತಿಯಿಂದ ಬಿಡುಗಡೆಗೊಂಡ ಕಾರ್ಮಿಕರ **ಪುನರ್ವಸತಿಗಾಗಿ** ಚೌಕಟ್ಟನ್ನು ಸಹ ಒದಗಿಸುತ್ತದೆ.
- **ಬಾಲಾಪರಾಧಿ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ, 2015:-** ಇದು ಕಾನೂನಿನ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳನ್ನು ನಿರ್ವಹಿಸುತ್ತದೆ.
- **ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO) ಕಾಯ್ದೆ, 2012:-** ಇದು ಮಕ್ಕಳ **ವಾಣಿಜ್ಯಕ ಲೈಂಗಿಕ ಶೋಷಣೆಯನ್ನು ತಡೆಯಲು** ಪ್ರಯತ್ನಿಸುತ್ತದೆ.

## ಬಾಗುರುಂಬಾ ನೃತ್ಯ

(ಸಂಸ್ಕೃತಿ)

### ಇದೀಗ ಸುದ್ದಿಯಲ್ಲಿದೆ:

- ಇತ್ತೀಚೆಗೆ, ಪ್ರಧಾನ ಮಂತ್ರಿಯವರು **ಅಸ್ಸಾಂಗೆ** ಭೇಟಿ ನೀಡಿ, ಬಾಗುರುಂಬಾ ಧೌ 2026 ಕಾರ್ಯಕ್ರಮದಲ್ಲಿ ಭಾಗವಹಿಸಿದರು.

### ಬಾಗುರುಂಬಾ ನೃತ್ಯದ ಬಗ್ಗೆ:

- ಇದನ್ನು ಸಾಮಾನ್ಯವಾಗಿ **"ಚಿಟ್ಟೆ ನೃತ್ಯ"** ಎಂದು ಉಲ್ಲೇಖಿಸಲಾಗುತ್ತದೆ.
- **ಅಸ್ಸಾಂನ ಬೋಡೋ ಸಮುದಾಯದ ಒಂದು ಸಮೂಹ ಜಾನಪದ ನೃತ್ಯ:-** ಅತ್ಯಂತ ಪ್ರಮುಖ ಮತ್ತು ಆಕರ್ಷಕ ಜಾನಪದ ನೃತ್ಯಗಳಲ್ಲಿ ಒಂದಾಗಿದೆ.
- **ಸಾಂಪ್ರದಾಯಿಕವಾಗಿ ಯುವತಿಯರು ಪ್ರದರ್ಶಿಸುವ ನೃತ್ಯ:-** ಪ್ರಕೃತಿಯೊಂದಿಗಿನ ಸಾಮರಸ್ಯವನ್ನು ಸಂಕೇತಿಸುತ್ತದೆ ಹಾಗೂ ಫಲವತ್ತತೆ, ಶಾಂತಿ ಮತ್ತು ಸಂತೋಷದ ವಿಷಯಗಳನ್ನು ಆಚರಿಸುತ್ತದೆ.
- **'ಬ್ವಿಸಾಗು' ಹಬ್ಬ ಬೋಡೋ ಸಮುದಾಯದ ಹೊಸ ವರ್ಷ:-** ಈ ನೃತ್ಯವು 'ಬ್ವಿಸಾಗು' ಹಬ್ಬದೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಈ ಹಬ್ಬವು ಬೋಡೋ ಹೊಸ ವರ್ಷ ಮತ್ತು **ವಸಂತಕಾಲದ ಆಗಮನವನ್ನು** ಸೂಚಿಸುತ್ತದೆ.

## ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ (RNI)

(ಆಡಳಿತ)

### ಇದೀಗ ಸುದ್ದಿಯಲ್ಲಿದೆ:

- ಇತ್ತೀಚೆಗೆ, ಭಾರತವು 'ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ'(RNI)ವನ್ನು ಪರಿಚಯಿಸಿದೆ.

### ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ (RNI):

- **ರಾಷ್ಟ್ರೀಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಜಾಗತಿಕ ಮಾನದಂಡಗಳ ಚೌಕಟ್ಟು:-** ಇದು ಕೇವಲ ಆರ್ಥಿಕ ಶಕ್ತಿಯ ಮೇಲಿದ್ದ ಗಮನವನ್ನು **ನೈತಿಕ ಆಡಳಿತ, ಸುಸ್ಥಿರತೆ ಮತ್ತು ಜಾಗತಿಕ ಹೊಣೆಗಾರಿಕೆಯತ್ತ** ಬದಲಾಯಿಸುತ್ತದೆ.
- ಈ ಸೂಚ್ಯಂಕವು ದೇಶಗಳನ್ನು 4 ಪ್ರಮುಖ ಆಯಾಮಗಳ ಅಡಿಯಲ್ಲಿ ಮೌಲ್ಯಮಾಪನ ಮಾಡುತ್ತದೆ. ಅವುಗಳೆಂದರೆ:-
  1. **ನೈತಿಕ ಆಡಳಿತ,**
  2. **ಸಾಮಾಜಿಕ ಯೋಗಕ್ಷೇಮ,**
  3. **ಪರಿಸರ ಉಸ್ತುವಾರಿ,**
  4. **ಜಾಗತಿಕ ಹೊಣೆಗಾರಿಕೆ.**
- ಅಭಿವೃದ್ಧಿಪಡಿಸಿದವರು:-
  - **ವರ್ಲ್ಡ್ ಇಂಟಲೆಕ್ಚುವಲ್ ಫೌಂಡೇಶನ್' (WIF)**
  - **ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ (JNU)**
  - **ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಮುಂಬೈ (IIM-M)**
- **ಸಿಂಗಾಪುರ, ಸ್ವಿಟ್ಜರ್ಲೆಂಡ್ ಮತ್ತು ಡೆನ್ಮಾರ್ಕ್** ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದು, **ಭಾರತವು ಜಾಗತಿಕವಾಗಿ 16ನೇ ಸ್ಥಾನದಲ್ಲಿದೆ.**

## ಪರಿಸರ ಸಂರಕ್ಷಣೆ ನಿಧಿ

(ಭೂಗೋಳ ಮತ್ತು ಪರಿಸರ)

### ಇದೀಗ ಸುದ್ದಿಯಲ್ಲಿದೆ:

- ಕೇಂದ್ರ ಸರ್ಕಾರವು 'ಪರಿಸರ (ಸಂರಕ್ಷಣೆ) ನಿಧಿ'ಯ ಆಡಳಿತ ಮತ್ತು ಬಳಕೆಯನ್ನು ನಿಯಂತ್ರಿಸುವ ಸಮಗ್ರ ನಿಯಮಗಳನ್ನು ಅಧಿಕೃತವಾಗಿ ಅಧಿಸೂಚಿಸಿದೆ.

### ಪರಿಸರ (ಸಂರಕ್ಷಣೆ) ನಿಧಿಯ ಬಗ್ಗೆ:

- **ಪರಿಸರ (ಸಂರಕ್ಷಣೆ) ಕಾಯ್ದೆ, 1986:-** ಪರಿಸರ (ಸಂರಕ್ಷಣೆ) ನಿಧಿಯು ಈ ಕಾಯ್ದೆಯ ಅಡಿಯಲ್ಲಿ ಸ್ಥಾಪಿಸಲಾದ **ಶಾಸನಬದ್ಧ ಮತ್ತು ಮೀಸಲಾದ** ನಿಧಿಯಾಗಿದೆ.
- ಉದ್ದೇಶ:- **ಪರಿಸರ ಉಲ್ಲಂಘನೆಗಳಿಂದ ಸಂಗ್ರಹವಾದ ಹಣಕಾಸಿನ ದಂಡವನ್ನು ಮಾಲಿನ್ಯ ನಿಯಂತ್ರಣ, ಮರುಸ್ಥಾಪನೆ, ಮೇಲ್ವಿಚಾರಣೆ, ಸಂಶೋಧನೆ ಮತ್ತು ಸಾಮರ್ಥ್ಯ** ವೃದ್ಧಿಗಾಗಿ ಬಳಸುವುದು.
- ಕಾರ್ಯ ನಿರ್ವಹಣೆ:- **ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ** (MoEFCC) ಅಥವಾ **ಕೇಂದ್ರ ಸರ್ಕಾರವು ಅಧಿಸೂಚಿಸಿದ ಯಾವುದೇ ಸಂಸ್ಥೆ.**
- ಹಣ ಹಂಚಿಕೆ:- ದಂಡದ ಮೂಲಕ ಸಂಗ್ರಹವಾದ ಹಣದಲ್ಲಿ
  - ➢ **ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ 'ಸಂಚಿತ ನಿಧಿ'ಗೆ 75% ರಷ್ಟು ಹಣವನ್ನು ವರ್ಗಾಯಿಸಲಾಗುತ್ತದೆ** ಮತ್ತು
  - ➢ **25% ರಷ್ಟು ಹಣವನ್ನು ಕೇಂದ್ರ ಸರ್ಕಾರ ಉಳಿಸಿಕೊಳ್ಳುತ್ತದೆ.**
- **ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಪರಿಶೋಧಕ(CAG)ರು**, ಈ ನಿಧಿಯ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ.

## ಚಾಗೋಸ್ ದ್ವೀಪಗಳು

ಅಂತರರಾಷ್ಟ್ರೀಯ




**ಇದೀಗ ಸುದ್ದಿಯಲ್ಲಿದೆ:**

- ಯುನೈಟೆಡ್ ಕಿಂಗ್‌ಡಮ್ (ಯುಕೆ) ಸರ್ಕಾರವು ಚಾಗೋಸ್ ದ್ವೀಪಗಳನ್ನು ಮಾರಿಷಸ್‌ಗೆ ಹಸ್ತಾಂತರಿಸುವ ಮತ್ತು ಅದೇ ಸಮಯದಲ್ಲಿ ಆಯಕಟ್ಟಿನ ಮಿಲಿಟರಿ ನೆಲೆಗಾಗಿ ಗುತ್ತಿಗೆಯನ್ನು ಉಳಿಸಿಕೊಳ್ಳುವ ತನ್ನ ಒಪ್ಪಂದವನ್ನು ಸಮರ್ಥಿಸಿಕೊಂಡಿದೆ. ಈ ಒಪ್ಪಂದದ ಬಗ್ಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಟೀಕೆಗಳು ವ್ಯಕ್ತವಾಗಿದ್ದವು.
- 2025 ರಲ್ಲಿ, ಯುನೈಟೆಡ್ ಕಿಂಗ್‌ಡಮ್ ವಿವಾದಾತ್ಮಕ ಮತ್ತು ಆಯಕಟ್ಟಿನ ಚಾಗೋಸ್ ದ್ವೀಪಗಳ ಸಾರ್ವಭೌಮತ್ವವನ್ನು ಮಾರಿಷಸ್‌ಗೆ ಹಸ್ತಾಂತರಿಸುವ ಒಪ್ಪಂದಕ್ಕೆ ಸಹಿ ಹಾಕಿತು.

**ಚಾಗೋಸ್ ದ್ವೀಪಸಮೂಹ'ದ ಬಗ್ಗೆ:**

- ಇದು ಹಿಂದೂ ಮಹಾಸಾಗರದಲ್ಲಿ ಮಾರಿಷಸ್‌ನ ಮುಖ್ಯ ದ್ವೀಪದ ಈಶಾನ್ಯಕ್ಕೆ ಸುಮಾರು 1,600 ಕಿ.ಮೀ ದೂರದಲ್ಲಿರುವ 60 ಕ್ಕೂ ಹೆಚ್ಚು ತಗ್ಗು ದ್ವೀಪಗಳನ್ನು ಒಳಗೊಂಡಿದೆ.
- ಮಾರಿಷಸ್ ಇನ್ನೂ ಬ್ರಿಟಿಷ್ ವಸಾಹತುವಾಗಿದ್ದಾಗ, 1965 ರಲ್ಲಿ ಇದನ್ನು ಮಾರಿಷಸ್‌ನಿಂದ ಬೇರ್ಪಡಿಸಲಾಯಿತು.
- ಬ್ರಿಟನ್ ಈ ದ್ವೀಪಗಳನ್ನು ಮೂರು ಮಿಲಿಯನ್ ಪೌಂಡ್‌ಗಳಿಗೆ ಖರೀದಿಸಿತು. ಆದರೆ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆಯುವ ಒಪ್ಪಂದದ ಭಾಗವಾಗಿ, ಕಾನೂನುಬಾಹಿರವಾಗಿ ಇವುಗಳನ್ನು ಬಿಟ್ಟುಕೊಡುವಂತೆ ತಮ್ಮನ್ನು ಒತ್ತಾಯಿಸಲಾಯಿತು ಎಂದು ಮಾರಿಷಸ್ ವಾದಿಸುತ್ತಿದೆ.
- 1960 ರ ದಶಕದ ಉತ್ತರಾರ್ಧದಲ್ಲಿ, ಬ್ರಿಟನ್ ಚಾಗೋಸ್ ದ್ವೀಪಗಳಲ್ಲಿ ಅತಿದೊಡ್ಡದಾದ 'ಡಿಯಾಗೋ ಗಾರ್ಸಿಯಾ'ದಲ್ಲಿ ಮಿಲಿಟರಿ ನೆಲೆಯನ್ನು ನಿರ್ಮಿಸಲು ಅಮೆರಿಕವನ್ನು ಆಹ್ವಾನಿಸಿತು ಮತ್ತು ಅಲ್ಲಿನ ಸಾವಿರಾರು ಜನರನ್ನು ಅವರ ಮನೆಗಳಿಂದ ತೆರವುಗೊಳಿಸಿತು.
- 1980 ರ ದಶಕದಿಂದಲೂ, ಮಾರಿಷಸ್ ಚಾಗೋಸ್ ದ್ವೀಪಗಳ ಮೇಲೆ ಸಾರ್ವಭೌಮತ್ವವನ್ನು ಪ್ರತಿಪಾದಿಸುತ್ತಿದೆ.
- **ಅಂತರರಾಷ್ಟ್ರೀಯ ನ್ಯಾಯಾಲಯದ ತೀರ್ಪು:** 2019 ರಲ್ಲಿ, ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ನ್ಯಾಯಾಲಯವು (ICJ) 1968 ರಲ್ಲಿ ಸ್ವಾತಂತ್ರ್ಯದ ಸಮಯದಲ್ಲಿ ಮಾರಿಷಸ್‌ನ 'ವಸಾಹತುಶಾಹಿ ವಿಮೋಚನೆ' ಅಪೂರ್ಣವಾಗಿದೆ ಎಂದು ತೀರ್ಪು ನೀಡಿತು ಮತ್ತು ಯುಕೆ ಆದಷ್ಟು ಬೇಗ ದ್ವೀಪಗಳ ಆಡಳಿತವನ್ನು ಕೊನೆಗೊಳಿಸಬೇಕು ಎಂದು ಸಲಹೆ ನೀಡಿತು.

## ಮಣಿಪುರ, ಮೇಘಾಲಯ ಮತ್ತು ತ್ರಿಪುರಾ ರಾಜ್ಯೋತ್ಸವ ದಿನ

(ರಾಜ್ಯಶಾಸ್ತ್ರ ಮತ್ತು ಆಡಳಿತ)

**ಇದೀಗ ಸುದ್ದಿಯಲ್ಲಿದೆ:**

- ಭಾರತದ ರಾಷ್ಟ್ರಪತಿಗಳು ಮೇಘಾಲಯ, ತ್ರಿಪುರಾ ಮತ್ತು ಮಣಿಪುರ ಜನತೆಗೆ ಅವರ ರಾಜ್ಯೋತ್ಸವ ದಿನದಂದು ಶುಭಾಶಯ ಕೋರಿದ್ದಾರೆ.

- 'ಈಶಾನ್ಯ ಪ್ರದೇಶಗಳ (ಪುನಾರಚನೆ) ಕಾಯಿದೆ, 1971' ಜಾರಿಗೆ ಬಂದ ನಂತರ, 1972 ರ ಜನವರಿ 21 ರಂದು ಮಣಿಪುರ, ಮೇಘಾಲಯ ಮತ್ತು ತ್ರಿಪುರಾಗಳಿಗೆ ರಾಜ್ಯ ಸ್ಥಾನಮಾನವನ್ನು ನೀಡಲಾಯಿತು.

**ಐತಿಹಾಸಿಕ ಹಿನ್ನೆಲೆ:**

- **ಮಣಿಪುರ:** ಒಂದು ರಾಜ ಸಂಸ್ಥಾನವಾಗಿದ್ದ ಮಣಿಪುರವು, 1949 ರಲ್ಲಿ ಭಾರತದೊಂದಿಗೆ ವಿಲೀನಗೊಂಡಿತು. ರಾಜ್ಯ ಸ್ಥಾನಮಾನ ಪಡೆಯುವ ಮೊದಲು, ಇದು 1956 ರಿಂದ ಕೇಂದ್ರಾಡಳಿತ ಪ್ರದೇಶವಾಗಿ ಕಾರ್ಯನಿರ್ವಹಿಸುತ್ತಿತ್ತು.
- **ತ್ರಿಪುರಾ:** ಇದೂ ಕೂಡ ಒಂದು ಸಂಸ್ಥಾನವಾಗಿತ್ತು ಮತ್ತು 1949 ರಲ್ಲಿ ಭಾರತೀಯ ಒಕ್ಕೂಟಕ್ಕೆ ಸೇರಿತು. ಮಣಿಪುರದಂತೆಯೇ, 1972 ರಲ್ಲಿ ಪೂರ್ಣ ರಾಜ್ಯವಾಗುವ ಮೊದಲು ಇದು 1956 ರಿಂದ ಕೇಂದ್ರಾಡಳಿತ ಪ್ರದೇಶವಾಗಿತ್ತು.
- **ಮೇಘಾಲಯ:** ಮೂಲತಃ ಅಸ್ಸಾಂನ ಭಾಗವಾಗಿದ್ದ ಇದನ್ನು, 1970 ರಲ್ಲಿ ಅಸ್ಸಾಂನ ಅಡಿಯಲ್ಲಿ ಮೊದಲು ಸ್ವಾಯತ್ತ ರಾಜ್ಯವನ್ನಾಗಿ ಮಾಡಲಾಯಿತು. ನಂತರ ಅದರ ವಿಶಿಷ್ಟ ಬುಡಕಟ್ಟು ಮತ್ತು ಸಾಂಸ್ಕೃತಿಕ ಅಸ್ಮಿತೆಯನ್ನು ಗುರುತಿಸಲು, 1972 ರಲ್ಲಿ ಇದನ್ನು ಪ್ರತ್ಯೇಕ ರಾಜ್ಯವನ್ನಾಗಿ ರೂಪಿಸಲಾಯಿತು.

## ಒಂದು ನಿಲ್ದಾಣ ಒಂದು ಉತ್ಪನ್ನ (OSOP)

(ಸರ್ಕಾರಿ ಯೋಜನೆಗಳು)

**ಇದೀಗ ಸುದ್ದಿಯಲ್ಲಿದೆ:**

- ಭಾರತೀಯ ರೈಲ್ವೆಯ 'ಒಂದು ನಿಲ್ದಾಣ ಒಂದು ಉತ್ಪನ್ನ' (OSOP) ಯೋಜನೆಯು 2,000 ಕ್ಕೂ ಹೆಚ್ಚು ರೈಲ್ವೆ ನಿಲ್ದಾಣಗಳಿಗೆ ವಿಸ್ತರಿಸಿದೆ. ಇದು 1.32 ಲಕ್ಷ ಕುಶಲಕರ್ಮಿಗಳನ್ನು ಸಬಲೀಕರಣಗೊಳಿಸಿದೆ.

**'ಒಂದು ನಿಲ್ದಾಣ ಒಂದು ಉತ್ಪನ್ನ' (OSOP) ಯೋಜನೆ'ಯ ಬಗ್ಗೆ:**

- ಈ ಯೋಜನೆಯನ್ನು 2022 ರಲ್ಲಿ ಪ್ರಾರಂಭಿಸಲಾಯಿತು.
- **ಉದ್ದೇಶ:** ಭಾರತದ ವಿಶಾಲವಾದ ರೈಲ್ವೆ ಜಾಲವನ್ನು ಬಳಸಿಕೊಂಡು ಸ್ಥಳೀಯ, ಸ್ವದೇಶಿ ಮತ್ತು ವಿಶೇಷ ಉತ್ಪನ್ನಗಳನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ.
- **ವಿಶಿಷ್ಟತೆ:** ರೈಲ್ವೆ ಸಚಿವಾಲಯವು OSOP ಮಳಿಗೆಗಳನ್ನು ನೋಡಲು ಕಲಾತ್ಮಕವಾಗಿ ಏಕರೂಪವಾಗಿ ಕಾಣುವಂತೆ, ಆದರೆ ಸ್ಥಳೀಯವಾಗಿ ವಿಶಿಷ್ಟವಾಗಿರುವಂತೆ ವಿನ್ಯಾಸಗೊಳಿಸಿದೆ.
- ಪ್ರಯಾಣಿಕರಿಗೆ ಉಪಯುಕ್ತ ಮತ್ತು ಆಕರ್ಷಕವಾಗಿರಲು, ಈ ಮಳಿಗೆಗಳನ್ನು ಸಾಮಾನ್ಯವಾಗಿ 'ರಾಷ್ಟ್ರೀಯ ವಿನ್ಯಾಸ ಸಂಸ್ಥೆ' (NID) ವಿನ್ಯಾಸಗೊಳಿಸಿದೆ.
- OSOP ಯೋಜನೆಯು 'ಪಿಎಂ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್'ನ ಪ್ರಮುಖ ಭಾಗವಾಗಿದೆ. ಇದು ತಡೆರಹಿತ ಬಹು-ಮಾದರಿ ಸಂಪರ್ಕವನ್ನು ಒದಗಿಸುವ ಮತ್ತು ಸ್ಥಳೀಯ ಸರಕುಗಳ ಸಾಗಣೆಯನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.

## ಐರೋಪ್ಯ ಒಕ್ಕೂಟದ 'ಬಲವಂತ-ವಿರೋಧಿ ಸಾಧನ' EU's Anti-coercion Instrument

(ಅಂತರರಾಷ್ಟ್ರೀಯ)

**ಇದೀಗ ಸುದ್ದಿಯಲ್ಲಿದೆ:**

- ಗ್ರೀನ್‌ಲ್ಯಾಂಡ್‌ಗೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷರು ಸುಂಕದ ಬೆದರಿಕೆಗಳನ್ನು ಹಾಕಿದ ನಂತರ, ಫ್ರಾನ್ಸ್ ಅಧ್ಯಕ್ಷರು ಐರೋಪ್ಯ ಒಕ್ಕೂಟದ (EU) 'ಬಲವಂತ-ವಿರೋಧಿ ಸಾಧನ'ವನ್ನು ಸಕ್ರಿಯಗೊಳಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ.

**ಐರೋಪ್ಯ ಒಕ್ಕೂಟದ 'ಬಲವಂತ-ವಿರೋಧಿ ಸಾಧನ'ದ ಬಗ್ಗೆ:**

- ಇದೊಂದು ವ್ಯಾಪಾರ ಸಾಧನವಾಗಿದ್ದು, ಐರೋಪ್ಯ ಒಕ್ಕೂಟವು ಇದನ್ನು 2023 ರಲ್ಲಿ ಅಂಗೀಕರಿಸಿತ್ತು, ಆದರೆ ಇದುವರೆಗೂ ಇದನ್ನು ಬಳಸಿಲ್ಲ.
- **ಉದ್ದೇಶ:** ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರವೊಂದರ ಮೇಲೆ ಒತ್ತಡ ಹೇರಲು ಯಾವುದೇ ದೇಶವು 'ವ್ಯಾಪಾರ ಅಸ್ತ್ರಗಳನ್ನು' ಬಳಸಿದರೆ, ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡುವುದು ಇದರ ಉದ್ದೇಶವಾಗಿದೆ.

**ಕ್ರಮಗಳು:**

- ಈ ವ್ಯವಸ್ಥೆಯು, ತನ್ನ 'ಏಕ ಮಾರುಕಟ್ಟೆಯಲ್ಲಿ' ಸರಕು ಮತ್ತು ಸೇವೆಗಳ ಮೇಲೆ ಆಮದು ಮತ್ತು ರಫ್ತು ನಿರ್ಬಂಧಗಳಂತಹ ಕ್ರಮಗಳನ್ನು ತೆಗೆದುಕೊಳ್ಳಲು ಐರೋಪ್ಯ ಒಕ್ಕೂಟಕ್ಕೆ ಅವಕಾಶ ನೀಡುತ್ತದೆ.
- ಇದು ಯುರೋಪಿನಲ್ಲಿ ಸಾರ್ವಜನಿಕ ಖರೀದಿ ಗುತ್ತಿಗೆಗಳನ್ನು ಪಡೆಯದಂತೆ ಅಮೆರಿಕದ ಕಂಪನಿಗಳ ಪ್ರವೇಶವನ್ನು ಮಿತಿಗೊಳಿಸುತ್ತದೆ.

## ಸರ್ಫೇಸಿ ಕಾಯ್ದೆ,2002 (SARFAESI Act, 2002)

ಆರ್ಥಿಕತೆ

**ಇದೀಗ ಸುದ್ದಿಯಲ್ಲಿದೆ:**

- ಕೇಂದ್ರ ಸರ್ಕಾರವು ಕಾನೂನು ಅಸ್ಪಷ್ಟತೆಗಳನ್ನು ನಿವಾರಿಸಲು ಮತ್ತು ನಿಯಂತ್ರಕ ಮೇಲ್ವಿಚಾರಣೆಯನ್ನು ಬಲಪಡಿಸಲು 'ಸರ್ಫೇಸಿ ಕಾಯ್ದೆ, 2002' ಕ್ಕೆ ತಿದ್ದುಪಡಿಗಳನ್ನು ತರಲು ಪರಿಗಣಿಸುತ್ತಿದೆ.

### ಸರ್ಫೇಸಿ ಕಾಯ್ದೆ, 2002:

- **ಪೂರ್ಣ ರೂಪ:** ಇದು ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಆಸಕ್ತಿಯ ಜಾರಿ' (SARFAESI) ಕಾಯ್ದೆಯನ್ನು ಸೂಚಿಸುತ್ತದೆ.
- **ಆಧ್ಯಾದೇಶ:** ಇದು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಅನುತ್ಪಾದಕ ಆಸ್ತಿಗಳನ್ನು (NPAs) ಮರುಪಡೆಯಲು ಕಾನೂನು ವ್ಯವಸ್ಥೆಯನ್ನು ಒದಗಿಸುತ್ತದೆ.
- ಇದು ಸಾಲ ನೀಡುವವರಿಗೆ ನ್ಯಾಯಾಲಯ ಅಥವಾ ನ್ಯಾಯಮಂಡಳಿಯ ಮಧ್ಯಸ್ಥಿಕೆಯಿಲ್ಲದೆ ಭದ್ರತಾ ಹಿತಾಸಕ್ತಿಗಳನ್ನು ಜಾರಿಗೊಳಿಸಲು ಅನುಮತಿಸುತ್ತದೆ.
- ಬಾಕಿ ಉಳಿದಿರುವ ಸಾಲದ ಮೊತ್ತವು ₹1 ಲಕ್ಷಕ್ಕಿಂತ ಹೆಚ್ಚಿದ್ದಾಗ ಈ ಕಾಯ್ದೆಯು ಅನ್ವಯಿಸುತ್ತದೆ.
- ಸಾಲಗಾರರು ಅಥವಾ ಜಾಮೀನುದಾರರು ಅಡಮಾನವಿಟ್ಟ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಮೂಲಕ, ಬ್ಯಾಂಕುಗಳು ತಮ್ಮ ಸಾಲವನ್ನು ಮರುಪಡೆಯಬಹುದು.

## ಅಂಟಾರ್ಕ್ಟಿಕ್ ಪೆಂಗ್ವಿನ್‌ಗಳು

(ಭೂಗೋಳ ಮತ್ತು ಪರಿಸರ)



### ಇದೀಗ ಸುದ್ದಿಯಲ್ಲಿದೆ:

- ಹವಾಮಾನ ಬದಲಾವಣೆಯ ಪರಿಣಾಮವಾಗಿ, ಪೆಂಗ್ವಿನ್‌ಗಳು ತಮ್ಮ ಸಂತಾನೋತ್ಪತ್ತಿ ಪ್ರಕ್ರಿಯೆಯನ್ನು ವಾಡಿಕೆಗಿಂತ ಮೊದಲೇ ಆರಂಭಿಸುತ್ತಿವೆ ಎಂದು ಅಧ್ಯಯನವೊಂದು ವರದಿ ಮಾಡಿದೆ.

### ಪೆಂಗ್ವಿನ್‌ಗಳ ಬಗ್ಗೆ:

- ಪೆಂಗ್ವಿನ್‌ಗಳು ಹಾರಲಾರದ ಪಕ್ಷಿಗಳಾಗಿದ್ದು, ಸಮುದ್ರ ಪರಿಸರಕ್ಕೆ ಹೆಚ್ಚು ಹೊಂದಿಕೊಂಡಿವೆ.
- ಇವು ಅತ್ಯುತ್ತಮ ಈಜುಗಾರ ಪಕ್ಷಿಗಳಾಗಿದ್ದು, ನೀರಿನಲ್ಲಿ ಬಹಳ ಆಳಕ್ಕೆ ಮುಳುಗಬಲ್ಲವು.
- ಆಳದ ನೀರಿನಿಂದ ಪೋಷಕಾಂಶಗಳನ್ನು ಮೇಲ್ಮೈಗೆ ತರುವುದು ಸೇರಿದಂತೆ, ಅಂಟಾರ್ಕ್ಟಿಕ್ ಆಹಾರ ಸರಪಳಿಗಳಲ್ಲಿ ಇವು ಪ್ರಮುಖ ಪಾತ್ರವಹಿಸುತ್ತವೆ. ಪಾಚಿಗಳು ತಮ್ಮ ದ್ಯುತಿಸಂಶ್ಲೇಷಣೆ ಕ್ರಿಯೆಯನ್ನು ಪೂರ್ಣಗೊಳಿಸಲು ಇದು ಅತ್ಯಗತ್ಯವಾಗಿದೆ.
- ಇವುಗಳು ಪ್ರಮುಖವಾಗಿ ದಕ್ಷಿಣ ಗೋಳಾರ್ಧದಲ್ಲಿ ವಾಸಿಸುತ್ತವೆ.

### ಪ್ರಮುಖ ಪೆಂಗ್ವಿನ್ ಪ್ರಭೇದಗಳು:

| ಕ್ರ. ಸಂ. | ಪೆಂಗ್ವಿನ್ ಪ್ರಭೇದಗಳು | ವೈಜ್ಞಾನಿಕ ಹೆಸರು | IUCN ಕೆಂಪು ಪಟ್ಟಿಯ ಸ್ಥಿತಿಗತಿ |
|---|---|---|---|
| 1 | ಎಂಪರರ್ ಪೆಂಗ್ವಿನ್ | ಆಪ್ಟೆನೋಡೈಟ್ಸ್ ಫಾರ್ಸ್ಟರಿ (Aptenodytes forsteri) | ಬೆದರಿಕೆಯ ಅಂಚಿನಲ್ಲಿರುವ( NT) |
| 2 | ರಾಯಲ್ ಪೆಂಗ್ವಿನ್ | ಯುಡಿಪ್ಟೆಸ್ ಶ್ಲೆಗೆಲಿ (Eudyptes schlegeli) | ಕನಿಷ್ಠ ಕಾಳಜಿ (LC) |
| 3 | ಅಡೆಲಿ ಪೆಂಗ್ವಿನ್ | ಪೈಗೋಸೆಲಿಸ್ ಅಡೆಲಿಯೆ (Pygoscelis adeliae) | ಕನಿಷ್ಠ ಕಾಳಜಿ (LC) |
| 4 | ಹಂಬೋಲ್ಟ್ ಪೆಂಗ್ವಿನ್ | ಸ್ಫೆನಿಸ್ಕಸ್ ಹಂಬೋಲ್ಟಿ (Spheniscus humboldti) | ದುರ್ಬಲ (VU) |

| | | | |
|---|---|---|---|
| 5 | ಮೆಗೆಲ್ಲಾನಿಕ್ ಪೆಂಗ್ವಿನ್ | ಸ್ಪೆನಿಸ್ಕಸ್ ಮೆಗೆಲ್ಲಾನಿಕಸ್ (Spheniscus magellanicus) | ಕನಿಷ್ಠ ಕಾಳಜಿ (LC) |
| 6 | ಫಿಯೋರ್ಡ್‌ಲ್ಯಾಂಡ್ ಪೆಂಗ್ವಿನ್ | ಯುಡಿಪ್ಟೆಸ್ ಪ್ಯಾಚಿರಿಂಚಸ್ (Eudyptes pachyrhynchus) | ಬೆದರಿಕೆಯ ಅಂಚಿನಲ್ಲಿರುವ (NT) |
| 7 | ಜೆಂಟೂ ಪೆಂಗ್ವಿನ್ | ಪೈಗೋಸೆಲಿಸ್ ಪಪುವಾ (Pygoscelis papua) | ಕನಿಷ್ಠ ಕಾಳಜಿ (LC) |

## ಗಾಜಾ ಶಾಂತಿ ಮಂಡಳಿ

(ಅಂತರರಾಷ್ಟ್ರೀಯ)

**ಇದೀಗ ಸುದ್ದಿಯಲ್ಲಿದೆ:**

- ಪ್ರಸ್ತಾಪಿತ 'ಗಾಜಾ ಶಾಂತಿ ಮಂಡಳಿ'ಗೆ ಸೇರುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಆಹ್ವಾನಕ್ಕೆ, ಭಾರತ ಸರ್ಕಾರವು ತನ್ನ ಪ್ರತಿಕ್ರಿಯೆಯನ್ನು ನೀಡುವ ಬಗ್ಗೆ ಪರಿಶೀಲಿಸುತ್ತಿದೆ.

**'ಗಾಜಾ ಶಾಂತಿ ಮಂಡಳಿ'ಯ ಬಗ್ಗೆ:**

- ಇದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಧ್ಯಕ್ಷತೆಯ ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ. ಇಸ್ರೇಲ್-ಹಮಾಸ್ ಯುದ್ಧದಲ್ಲಿ ಅಕ್ಟೋಬರ್ 2025 ರ ಕದನ ವಿರಾಮದ ಮೇಲ್ವಿಚಾರಣೆ ಮತ್ತು ಗಾಜಾ ಯುದ್ಧದ ನಂತರದ ಪರಿವರ್ತನೆಯನ್ನು ನಿರ್ವಹಿಸಲು ಇದನ್ನು ರಚಿಸಲಾಗಿದೆ.
- ಈ ಉಪಕ್ರಮವನ್ನು ಅಕ್ಟೋಬರ್ 2025 ರಲ್ಲಿ ಪ್ರಸ್ತಾಪಿಸಲಾಯಿತು ಮತ್ತು ನಂತರ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಇದನ್ನು ಅನುಮೋದಿಸಿತು.

**ಸದಸ್ಯರು:**

- ಆಹ್ವಾನಿತ ಸುಮಾರು 50 ನಾಯಕರಲ್ಲಿ, ಸುಮಾರು 35 ಜಾಗತಿಕ ನಾಯಕರು ಪ್ರಸ್ತಾಪಿತ ಶಾಂತಿ ಮಂಡಳಿಗೆ ಸೇರಲು ಒಪ್ಪಿಕೊಂಡಿದ್ದಾರೆ.
- ಭಾಗವಹಿಸುವವರಲ್ಲಿ ಪ್ರಮುಖ ಮಧ್ಯಪ್ರಾಚ್ಯ ಮಿತ್ರರಾಷ್ಟ್ರಗಳಾದ ಇಸ್ರೇಲ್, ಸೌದಿ ಅರೇಬಿಯಾ, ಯುಎಇ, ಬಹ್ರೇನ್, ಜೋರ್ಡಾನ್, ಕತಾರ್ ಮತ್ತು ಈಜಿಪ್ಟ್, ಹಾಗೂ ನ್ಯಾಟೋ ಸದಸ್ಯರಾದ ಟರ್ಕಿ ಮತ್ತು ಹಂಗೇರಿ ಸೇರಿವೆ.
- ಏಷ್ಯಾ, ಆಫ್ರಿಕಾ, ಯುರೋಪ್ ಮತ್ತು ಲ್ಯಾಟಿನ್ ಅಮೆರಿಕದಾದ್ಯಂತ ಇರುವ ಇತರ ಹಲವಾರು ದೇಶಗಳು - ಪಾಕಿಸ್ತಾನ, ಇಂಡೋನೇಷ್ಯಾ, ವಿಯೆಟ್ನಾಂ, ಮೊರಾಕ್ಕೊ, ಅರ್ಮೇನಿಯಾ ಮತ್ತು ಅಜರ್ಬೈಜಾನ್ ಸೇರಿದಂತೆ ಹಲವು ದೇಶಗಳು ಇದರಲ್ಲಿ ಸೇರಿಕೊಂಡಿವೆ.
- ಸದಸ್ಯತ್ವದ ಅವಧಿಯು ಮೂರು ವರ್ಷಗಳವರೆಗೆ ಇರುತ್ತದೆ ಮತ್ತು ಇದನ್ನು ನವೀಕರಿಸುವ ಆಯ್ಕೆಯೂ ಇರುತ್ತದೆ.
- ಆರಂಭಿಕ ಅವಧಿಯನ್ನು ಮೀರಿ ತಮ್ಮ ಭಾಗವಹಿಸುವಿಕೆಯನ್ನು ವಿಸ್ತರಿಸಲು ಬಯಸುವ ದೇಶಗಳು 1 ಬಿಲಿಯನ್ ಡಾಲರ್ ಕೊಡುಗೆ ನೀಡಬೇಕಾಗಬಹುದು, ಆದರೆ ಅಲ್ಪಾವಧಿಯ ಭಾಗವಹಿಸುವಿಕೆಯು ಯಾವುದೇ ಆರ್ಥಿಕ ಬದ್ಧತೆಯನ್ನು ಒಳಗೊಂಡಿರುವುದಿಲ್ಲ.

**ಮಂಡಳಿಯ ಆದೇಶ ಮತ್ತು ಉದ್ದೇಶಗಳು:**

- ಮಂಡಳಿಯು ಗಾಜಾ ಪಟ್ಟಿಯಲ್ಲಿ 'ಗಾಜಾ ಆಡಳಿತಕ್ಕಾಗಿ ರಾಷ್ಟ್ರೀಯ ಸಮಿತಿ' ಎಂದು ಕರೆಯಲ್ಪಡುವ ಪರಿವರ್ತನಾ ಪ್ಯಾಲೇಸ್ಟಿನಿಯನ್ ತಾಂತ್ರಿಕ ಆಡಳಿತವನ್ನು ಮೇಲ್ವಿಚಾರಣೆ ಮಾಡುತ್ತದೆ.
- ಹಮಾಸ್ ಅನ್ನು ನಿಶ್ಯಸ್ತ್ರಗೊಳಿಸುವ ಪ್ರಯತ್ನಗಳು ಮತ್ತು 'ಅಂತರರಾಷ್ಟ್ರೀಯ ಸ್ಥಿರೀಕರಣ ಪಡೆ'ಯ ನಿಯೋಜನೆಯ ಮೇಲ್ವಿಚಾರಣೆಯನ್ನು ಸಹ ಮಂಡಳಿಯ ಆದೇಶವು ಒಳಗೊಂಡಿದೆ.
- ISF ಒಂದು ಬಹುರಾಷ್ಟ್ರೀಯ ಶಾಂತಿಪಾಲನಾ ಮಿಷನ್ ಆಗಿದ್ದು, ಭದ್ರತೆಯನ್ನು ಕಾಪಾಡುವುದು ಮತ್ತು ಹೊಸ ಪ್ಯಾಲೇಸ್ಟಿನಿಯನ್ ಪೊಲೀಸ್ ಪಡೆಗೆ ತರಬೇತಿ ನೀಡುವ ಜವಾಬ್ದಾರಿಯನ್ನು ಹೊಂದಿದೆ.

## ಅಟಲ್ ಪಿಂಚಣಿ ಯೋಜನೆ (APY)

(ಸರ್ಕಾರಿ ಯೋಜನೆಗಳು)

**ಇದೀಗ ಸುದ್ದಿಯಲ್ಲಿದೆ:**

- ಪ್ರಧಾನ ಮಂತ್ರಿಯವರ ನೇತೃತ್ವದ ಕೇಂದ್ರ ಸಚಿವ ಸಂಪುಟವು, ಅಟಲ್ ಪಿಂಚಣಿ ಯೋಜನೆಯನ್ನು 2030-31 ರವರೆಗೆ ಮುಂದುವರಿಸಲು ಅನುಮೋದನೆ ನೀಡಿದೆ. ಇದರ ಜೊತೆಗೆ, ಯೋಜನೆಯ ಪ್ರಚಾರ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯವಿರುವ ಆರ್ಥಿಕ ನೆರವನ್ನು ಮುಂದುವರಿಸಲು ಸಹ ಅನುಮೋದನೆ ನೀಡಲಾಗಿದೆ

'ಅಟಲ್ ಪಿಂಚಣಿ ಯೋಜನೆ'ಯ ಬಗ್ಗೆ:

- ಈ ಯೋಜನೆಯನ್ನು 2015 ರಲ್ಲಿ ಪ್ರಾರಂಭಿಸಲಾಯಿತು.
- **ಉದ್ದೇಶ:** ಅಸಂಘಟಿತ ವಲಯದ ಕಾರ್ಮಿಕರಿಗೆ ವೃದ್ಧಾಪ್ಯದ ಆದಾಯ ಭದ್ರತೆಯನ್ನು ಒದಗಿಸುವುದು ಇದರ ಉದ್ದೇಶವಾಗಿದೆ.
- **ಉದ್ದೇಶಿತ ಗುಂಪು:** ಇದು ಆರಂಭದಲ್ಲಿ ಇದು 18 ರಿಂದ 40 ವರ್ಷ ವಯಸ್ಸಿನ ಭಾರತದ ಎಲ್ಲಾ ನಾಗರಿಕರಿಗೆ ಲಭ್ಯವಿದೆ.
- **ಯೋಜನೆಯ ವೈಶಿಷ್ಟ್ಯಗಳು:** APY ಯೋಜನೆಯು ಚಂದಾದಾರರ ಕೊಡುಗೆಯ ಆಧಾರದ ಮೇಲೆ, 60 ನೇ ವಯಸ್ಸಿನಿಂದ ತಿಂಗಳಿಗೆ ರೂ. 1,000 ದಿಂದ ರೂ. 5,000 ರವರೆಗೆ ಖಾತರಿಯ ಕನಿಷ್ಠ ಪಿಂಚಣಿಯನ್ನು ನೀಡುತ್ತದೆ.
- **ನಿರ್ವಹಣಾ ಸಂಸ್ಥೆ:** ಇದನ್ನು 'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ' (PFRDA) ನಿರ್ವಹಿಸುತ್ತದೆ.
- ಇದನ್ನು 'ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ'ಯ ಚೌಕಟ್ಟಿನ ಅಡಿಯಲ್ಲಿ ನಿರ್ವಹಿಸಲಾಗುತ್ತದೆ.
- **ಪ್ರಗತಿ:** ಜನವರಿ 2026 ರ ಹೊತ್ತಿಗೆ, 8.66 ಕೋಟಿಗೂ ಹೆಚ್ಚು ಚಂದಾದಾರರು ನೋಂದಾಯಿಸಿಕೊಂಡಿದ್ದಾರೆ. ಇದು ಭಾರತದ ಅಂತರ್ಗತ ಸಾಮಾಜಿಕ ಭದ್ರತಾ ಚೌಕಟ್ಟಿನ ಪ್ರಮುಖ ಆಧಾರಸ್ತಂಭವಾಗಿದೆ.

## ಸಿ-295 ವಿಮಾನ

(ಭದ್ರತೆ)



ಇದೀಗ ಸುದ್ದಿಯಲ್ಲಿದೆ:

- ವಡೋದರಾದಲ್ಲಿರುವ ಏರ್‌ಬಸ್ ಮತ್ತು ಟಾಟಾ ಸಂಸ್ಥೆಯ ಜೋಡಣಾ ಘಟಕದಲ್ಲಿ ತಯಾರಾಗುತ್ತಿರುವ, ಮೊದಲ 'ಮೇಡ್ ಇನ್ ಇಂಡಿಯಾ' ಸಿ-295 ವಿಮಾನವು 2026 ರ ಸೆಪ್ಟೆಂಬರ್‌ಗಿಂತ ಮೊದಲೇ ಸಿದ್ಧಗೊಂಡು ಹೊರಬರಲಿದೆ. ಈ ಯೋಜನೆಯು ಭಾರತ ಮತ್ತು ಸ್ಪೇನ್ ದೇಶಗಳ ನಡುವಿನ ರಕ್ಷಣಾ ಸಹಕಾರವು ಮತ್ತಷ್ಟು ಬಲಗೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಸಿ-295 ವಿಮಾನದ ಬಗ್ಗೆ:

- **ಬಹುಮುಖಿ ಬಳಕೆ:** ಇದೊಂದು ಬಹುಮುಖಿ ಮತ್ತು ವಿಶ್ವಾಸಾರ್ಹವಾದ ಯುದ್ಧತಂತ್ರದ ಕುಶಲ ಸಾರಿಗೆ ವಿಮಾನವಾಗಿದೆ. ಇದನ್ನು ಸೈನಿಕರ ಅಥವಾ ಸರಕು ಸಾಗಣೆ, ಕಡಲ ಗಸ್ತು, ಕಣ್ಗಾವಲು, ವೈದ್ಯಕೀಯ ತುರ್ತು ಸ್ಥಳಾಂತರ ಮತ್ತು ಅಗ್ನಿಶಾಮಕ ಕಾರ್ಯಾಚರಣೆಗಳಲ್ಲಿ ಪರಿಣಾಮಕಾರಿಯಾಗಿ ಬಳಸಬಹುದು.
- **ಸಾಮರ್ಥ್ಯ:** ಈ ವಿಮಾನವು ಸುಮಾರು 8 ಟನ್‌ಗಳಷ್ಟು ಭಾರವನ್ನು ಅಥವಾ 70 ಸೈನಿಕರನ್ನು ಏಕಕಾಲದಲ್ಲಿ ಸಾಗಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ.
- **ಕಾರ್ಯಾಚರಣೆ:** ಇದು ಗಂಟೆಗೆ 260 ನಾಟ್ಸ್ ವೇಗದಲ್ಲಿ ಹಾರಾಟ ನಡೆಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಇದರ ವಿಶೇಷತೆಯೆಂದರೆ, ಇದು ಅತ್ಯಂತ ಚಿಕ್ಕದಾದ ಹಾಗೂ ಸುಸಜ್ಜಿತವಲ್ಲದ ಡಾಂಬರು ಹಾಕದ ಕಚ್ಚಾ ರನ್-ವೇಗಳಿಂದಲೂ ಸರಾಗವಾಗಿ ಕಾರ್ಯಾಚರಣೆ ನಡೆಸಬಲ್ಲ ಸಾಮರ್ಥ್ಯವನ್ನು ಹೊಂದಿದೆ.
- **ವೈಶಿಷ್ಟ್ಯಗಳು**: ಇದು ಸತತ 13 ಗಂಟೆಗಳ ಕಾಲ ಹಾರಾಟ ನಡೆಸುವ ಸಾಮರ್ಥ್ಯವನ್ನು ಹೊಂದಿದ್ದು, ಅತ್ಯುತ್ತಮ ನಿರ್ವಹಣಾ ಕೌಶಲ ಮತ್ತು ಇಂಧನ ದಕ್ಷತೆಯನ್ನು ಹೊಂದಿದೆ.
- **ಹಿನ್ನೆಲೆ:** ಏರ್‌ಬಸ್ ಸಿ-295 (ಈ ಹಿಂದಿನ CASA C-295) ಮಧ್ಯಮ ಶ್ರೇಣಿಯ, ಎರಡು ಎಂಜಿನ್‌ಗಳನ್ನು ಹೊಂದಿರುವ 'ಟರ್ಬೋಪ್ರಾಪ್' ಸಾರಿಗೆ ವಿಮಾನವಾಗಿದೆ. ಇದನ್ನು ಮೂಲತಃ ಸ್ಪೇನ್‌ನ ಏರೋಸ್ಪೇಸ್ ಕಂಪನಿ 'CASA' ವಿನ್ಯಾಸಗೊಳಿಸಿತ್ತು. ಪ್ರಸ್ತುತ ಈ ಸಂಸ್ಥೆಯು ಯುರೋಪಿನ ಬಹುರಾಷ್ಟ್ರೀಯ ಕಂಪನಿ 'ಏರ್‌ಬಸ್ ಡಿಫೆನ್ಸ್ ಮತ್ತು ಸ್ಪೇಸ್' ವಿಭಾಗದ ಭಾಗವಾಗಿದೆ.

## ಗ್ರಾಕಾ ಮಾಚೆಲ್ ಅವರಿಗೆ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ

(ಇತರೆ)



ಇದೀಗ ಸುದ್ದಿಯಲ್ಲಿದೆ:

- ಮೊಜಾಂಬಿಕ್‌ನ ಹಕ್ಕುಗಳ ಹೋರಾಟಗಾರ್ತಿ ಮತ್ತು ಮಾನವತಾವಾದಿ ಗ್ರಾಕಾ ಮಾಚೆಲ್ ಅವರನ್ನು 2025 ರ 'ಶಾಂತಿ, ನಿಶ್ಯಸ್ತ್ರೀಕರಣ ಮತ್ತು ಅಭಿವೃದ್ಧಿಗಾಗಿ ಇಂದಿರಾ ಗಾಂಧಿ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ ಎಂದು ಇಂದಿರಾ ಗಾಂಧಿ ಸ್ಮಾರಕ ಟ್ರಸ್ಟ್ ಘೋಷಿಸಿದೆ.
- ಶಿಕ್ಷಣ, ಆರೋಗ್ಯ ಮತ್ತು ಪೋಷಣೆ, ಆರ್ಥಿಕ ಸಬಲೀಕರಣ ಮತ್ತು ಮಾನವೀಯ ಕಾರ್ಯಗಳ ಕ್ಷೇತ್ರಗಳಲ್ಲಿನ ಅವರ "ಮಾರ್ಗ-ನಿರ್ಮಾಪಕ ಕೆಲಸ"ಕ್ಕಾಗಿ ಗ್ರಾಕಾ ಮಾಚೆಲ್ ಅವರನ್ನು ಆಯ್ಕೆ ಮಾಡಲಾಗಿದೆ.

### 'ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ'ಯ ಬಗ್ಗೆ:

- ಈ ಪ್ರಶಸ್ತಿಯನ್ನು ಭಾರತದಲ್ಲಿ ಇಂದಿರಾ ಗಾಂಧಿ ಸ್ಮಾರಕ ಟ್ರಸ್ಟ್ ಸ್ಥಾಪಿಸಿದ ವಾರ್ಷಿಕ ಪ್ರಶಸ್ತಿಯಾಗಿದೆ.
- ಭಾರತದ ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರ ಗೌರವಾರ್ಥವಾಗಿ ಈ ಪ್ರಶಸ್ತಿಗೆ ಅವರ ಹೆಸರನ್ನು ಇಡಲಾಗಿದೆ.
- ಇದನ್ನು 1986 ರಲ್ಲಿ ಸ್ಥಾಪಿಸಲಾಯಿತು.
- **ಪ್ರಶಸ್ತಿ ಮೊತ್ತ:** ಇತ್ತೀಚೆಗೆ, ಈ ಪ್ರಶಸ್ತಿಯ ಮೊತ್ತವನ್ನು 25 ಲಕ್ಷ ರೂಪಾಯಿಗಳಿಂದ 1 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.
- **ಉದ್ದೇಶ:** ಶಾಂತಿ, ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸಲು ಮಹತ್ವದ ಕೊಡುಗೆ ನೀಡಿದ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.
- ಸಾಮಾನ್ಯವಾಗಿ, ನವೆಂಬರ್ 19 ರಂದು ಇಂದಿರಾ ಗಾಂಧಿಯವರ ಜನ್ಮದಿನದ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.
- **ವಿಭಾಗಗಳು:** ಈ ಪ್ರಶಸ್ತಿಯನ್ನು ಮೂರು ವಿಭಾಗಗಳಲ್ಲಿ ನೀಡಲಾಗುತ್ತದೆ:
  - **ಶಾಂತಿ:** ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಉತ್ತೇಜಿಸುವ ಮತ್ತು ಕಾಪಾಡುವ ಪ್ರಯತ್ನಗಳನ್ನು ಇದು ಗುರುತಿಸುತ್ತದೆ.
  - **ನಿಶ್ಯಸ್ತ್ರೀಕರಣ :** ಸಾಮೂಹಿಕ ವಿನಾಶದ ಅಸ್ತ್ರಗಳ ಕಡಿತ ಮತ್ತು ನಿರ್ಮೂಲನೆಗೆ ನೀಡಿದ ಕೊಡುಗೆಗಳನ್ನು ಇದು ಗುರುತಿಸುತ್ತದೆ.
  - **ಅಭಿವೃದ್ಧಿ:** ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿನ ಕಾರ್ಯವನ್ನು ಇದು ಗೌರವಿಸುತ್ತದೆ.

## ವೆಸ್ಟ್ ಬ್ಯಾಂಕ್ ಹೊರಠಾಣೆಗೆ 'ಹೊಸ ವಸಾಹತು' ಎಂಬ ಅಧಿಕೃತ ಮಾನ್ಯತೆ

(ಅಂತರರಾಷ್ಟ್ರೀಯ)




### ಇದೀಗ ಸುದ್ದಿಯಲ್ಲಿದೆ:

- ಇಸ್ರೇಲ್ ಸರ್ಕಾರವು ವೆಸ್ಟ್ ಬ್ಯಾಂಕ್‌ನಲ್ಲಿರುವ ಹೊರಠಾಣೆಯನ್ನು, 'ಯಾಟ್ಜಿವ್' (Yatziv) ಎಂಬ ಹೆಸರಿನ ಹೊಸ ವಸಾಹತು ಎಂದು ಸಂಪೂರ್ಣವಾಗಿ ಕಾನೂನುಬದ್ಧಗೊಳಿಸಿದೆ.
- 'ಯಾಟ್ಜಿವ್' ಎಂದು ಕರೆಯಲ್ಪಡುವ ಈ ಹೊಸದಾಗಿ ಸಕ್ರಮಗೊಂಡ ಯಹೂದಿ ವಸಾಹತು, ವೆಸ್ಟ್ ಬ್ಯಾಂಕ್‌ನಲ್ಲಿರುವ 'ಬೀಟ್ ಸಾಹೂರ್' ಎಂಬ ಪ್ಯಾಲೇಸ್ಟಿನಿಯನ್ ಪಟ್ಟಣದ ಪಕ್ಕದಲ್ಲಿದೆ.

### 'ವೆಸ್ಟ್ ಬ್ಯಾಂಕ್'ನ ಬಗ್ಗೆ:

- ವೆಸ್ಟ್ ಬ್ಯಾಂಕ್ ಪ್ರದೇಶವು ಜೋರ್ಡಾನ್ ನದಿಯ ಪಶ್ಚಿಮ ಭಾಗದಲ್ಲಿ ನೆಲೆಗೊಂಡಿದೆ. ಈ ಪ್ರದೇಶವು ಪಶ್ಚಿಮಕ್ಕೆ ಇಸ್ರೇಲ್, ಪೂರ್ವಕ್ಕೆ ಜೋರ್ಡಾನ್ ಮತ್ತು ನೈಋತ್ಯಕ್ಕೆ ಜೆರುಸಲೆಮ್‌ನಿಂದ ಸುತ್ತುವರಿದಿದೆ.
- ಇಲ್ಲಿನ ಪ್ರಮುಖ ನಗರಗಳಲ್ಲಿ ರಾಮಲ್ಲಾ (ಪ್ಯಾಲೇಸ್ಟಿನಿಯನ್ ಪ್ರಾಧಿಕಾರದ ಆಡಳಿತ ರಾಜಧಾನಿ), ಹೆಬ್ರಾನ್, ನಬ್ಲಸ್, ಜೆನಿನ್ ಮತ್ತು ಬೆತ್ಲೆಹೆಮ್ ನಗರಗಳು ಸೇರಿವೆ.

### 'ವೆಸ್ಟ್ ಬ್ಯಾಂಕ್'ನ ಇತಿಹಾಸ:

- **1948:** ಅರಬ್-ಇಸ್ರೇಲ್ ಯುದ್ಧದ ನಂತರ, ವೆಸ್ಟ್ ಬ್ಯಾಂಕ್ ಪ್ರದೇಶವನ್ನು ಆಕ್ರಮಿಸಿಕೊಳ್ಳಲಾಯಿತು. ತದನಂತರ 1949 ರಿಂದ 1967 ರವರೆಗೆ ಜೋರ್ಡಾನ್ ಇದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು.

- **1967:** 'ಆರು ದಿನಗಳ ಯುದ್ಧ'ದ ಸಮಯದಲ್ಲಿ, ಇಸ್ರೇಲ್ ಜೋರ್ಡಾನ್‌ನಿಂದ ವೆಸ್ಟ್ ಬ್ಯಾಂಕ್ ಅನ್ನು ವಶಪಡಿಸಿಕೊಂಡಿತು. ಅಂದಿನಿಂದ ಈ ಪ್ರದೇಶವು ವಿವಿಧ ಹಂತಗಳಲ್ಲಿ ಇಸ್ರೇಲಿ ನಿಯಂತ್ರಣದಲ್ಲಿ ಉಳಿದಿದೆ.
- **1993–1995 ಓಸ್ಲೋ ಒಪ್ಪಂದಗಳು:** ಈ ಒಪ್ಪಂದಗಳು 'ಪ್ಯಾಲೇಸ್ಟಿನಿಯನ್ ಪ್ರಾಧಿಕಾರ'ವನ್ನು ರಚಿಸಿದವು ಮತ್ತು ಆಡಳಿತದ ದೃಷ್ಟಿಯಿಂದ ವೆಸ್ಟ್ ಬ್ಯಾಂಕ್ ಅನ್ನು ಈ ಕೆಳಗಿನ ಮೂರು ವಿಭಾಗಗಳಾಗಿ ವಿಂಗಡಿಸಿದವು:
  - **ಪ್ರದೇಶ ಎ:** ಇಲ್ಲಿ ಸಂಪೂರ್ಣ ಪ್ಯಾಲೇಸ್ಟಿನಿಯನ್ ನಾಗರಿಕ ಮತ್ತು ಭದ್ರತಾ ನಿಯಂತ್ರಣವಿರುತ್ತದೆ.
  - **ಪ್ರದೇಶ ಬಿ:** ಇಲ್ಲಿ ಪ್ಯಾಲೇಸ್ಟಿನಿಯನ್ ನಾಗರಿಕ ನಿಯಂತ್ರಣವಿದ್ದು, ಜಂಟಿ ಇಸ್ರೇಲಿ-ಪ್ಯಾಲೇಸ್ಟಿನಿಯನ್ ಭದ್ರತಾ ನಿಯಂತ್ರಣವಿರುತ್ತದೆ.
  - **ಪ್ರದೇಶ ಸಿ:** ಇದು ಸಂಪೂರ್ಣ ಇಸ್ರೇಲಿ ನಿಯಂತ್ರಣದಲ್ಲಿರುವ ಪ್ರದೇಶವಾಗಿದೆ (ಇದು ವೆಸ್ಟ್ ಬ್ಯಾಂಕ್‌ನ ಸುಮಾರು 60% ರಷ್ಟು ಭಾಗವನ್ನು ಒಳಗೊಂಡಿದೆ).
- 1967 ರಲ್ಲಿ ಇಸ್ರೇಲ್ ವಶಪಡಿಸಿಕೊಂಡ ವೆಸ್ಟ್ ಬ್ಯಾಂಕ್ ಪ್ರದೇಶವನ್ನು, ಪ್ಯಾಲೇಸ್ಟಿನಿಯನ್ನರು ತಮ್ಮ ಭವಿಷ್ಯದ ಸ್ವತಂತ್ರ ರಾಷ್ಟ್ರದ ಅವಿಭಾಜ್ಯ ಅಂಗವನ್ನಾಗಿ ಮಾಡಲು ಬಯಸುತ್ತಾರೆ.

INSTA KAS


INSIGHTSIAS
SIMPLIFYING IAS EXAM PREPARATION
INSTA KAS
ಮಿಷನ್ ಆರಕ್ಷಕ
ಪಿಎಸ್ಐ/ಇಎಸ್ಐ/ಎಲ್ಲಾ ಗ್ರೂಪ್ ಸಿ @ ಬೆಂಗಳೂರು
ಬ್ಯಾಚ್ - 4
ತರಬೇತಿ ಪ್ರಾರಂಭ 23ನೇ ಫೆಬ್ರವರಿ 2026
ಪ್ರವೇಶ ಪರೀಕ್ಷೆ
ಪರೀಕ್ಷಾ ದಿನಾಂಕ: 18ನೇ ಫೆಬ್ರವರಿ 2026
SCHOLARSHIP TEST DETAILS
ಮೊದಲ 5 ಸ್ಥಾನ ಪಡೆದ ಸ್ಪರ್ಧಾರ್ಥಿಗಳಿಗೆ ಉಚಿತ ಪ್ರವೇಶ
6-10 Ranks: 50% Scholarship
11-25 Ranks: 30% Scholarship
26-50 Ranks: 20% Scholarship
ಶುಲ್ಕ:
₹ 25,000/- ₹ 20,000/-
Early Bird Offer
20% OFF
ಮಾರ್ಗದರ್ಶಕರು
ವಿನಯ್ ಕುಮಾರ್ ಜಿ ಬಿ
ಸ್ಥಾಪಕರು ಮತ್ತು ನಿರ್ದೇಶಕರು, ಇನ್‌ಸೈಟ್ಸ್ ಐಎಎಸ್
ತರಬೇತುದಾರರು
NAVEEN SIR
MODERN & KARNATAKA HISTORY
VINAYAK SIR
ANCIENT & MEDIEVAL
SHASHANK SIR
WORLD & INDIAN, KARNATAKA GEOGRAPHY
SHIVANANDA SIR
POLITY (HONORARY ADVISOR)
DHRUVA SIR
WORLD INDIAN & KARNATAKA GEOGRAPHY
VIJAY KUMAR SIR
PHYSICS
SRIKANTH SIR
BIOLOGY, CHEMISTRY & TECHNOLOGY
NANDAN SIR
ENVIRONMENT & CA
REGISTER HERE FOR COURSE
LINGARAJU SIR
ESSAY, PRECIS & TRANSLATION
NINGAPPA
MENTAL ABILITY
HEMANTH S K SIR
GENERAL KANNADA
SHIVAKUMAR MAVALI SIR
GENERAL ENGLISH
SANJAY SIR
COMPUTER
FOR ONLINE SCHOLARSHIP TEST
ಬೆಂಗಳೂರು ಕಚೇರಿ:
INSTA KAS , 1134/1, 2 ನೇ ಮಹಡಿ, ಶರಾವತಿ ಆಸ್ಪತ್ರೆಯ ಪಕ್ಕದಲ್ಲಿ, ಸರ್ವಿಸ್ ರಸ್ತೆ, ಅತ್ತಿಗುಪ್ಪೆ ಮೆಟ್ರೋ ನಿಲ್ದಾಣದ ಎದುರು, RPC ಲೇಔಟ್, ವಿಜಯನಗರ, ಬೆಂಗಳೂರು - 560040.
ಸಂಪರ್ಕ:
08069405206
ಮೇಲ್:
support@insightsias.com
www.insightsonindia.com
instacourses.insightsonindia.com
ಶಾಖೆಗಳು: ಬೆಂಗಳೂರು | ದೆಹಲಿ | ಶ್ರೀನಗರ | ದಾವಣಗೆರೆ


INSIGHTSIAS
SIMPLIFYING IAS EXAM PREPARATION
INSTAKAS
ಕೆ.ಪಿ.ಎಸ್.ಸಿ ಪ್ರಿಲಿಮ್ಸ್-ಕಮ್-ಮೇನ್ಸ್
2026 ಬೆಂಗಳೂರು
ಬ್ಯಾಚ್-02
ಪ್ರಾರಂಭ: 16ನೇ ಫೆಬ್ರವರಿ 2026
ಪೂರ್ವಭಾವಿ ಮತ್ತು ಮುಖ್ಯಪರೀಕ್ಷೆಗೆ ಸಂಯೋಜಿತ ತರಗತಿಗಳು (8-9 ತಿಂಗಳು)
ಮುಖ್ಯಪರೀಕ್ಷೆಯಲ್ಲಿನ ಉತ್ತರ ಬರೆಯುವ ಅಭ್ಯಾಸಕ್ಕೆ ಮಹತ್ವ ನೀಡಲಾಗುವುದು
ದ್ವಿಭಾಷಾ ಭೋಧನಾ ಮಾಧ್ಯಮ - (ಇಂಗ್ಲಿಷ್ ಮತ್ತು ಕನ್ನಡ)
ಪ್ರತಿಯೊಬ್ಬರಿಗೂ ವೈಯಕ್ತೀಕ ಮಾರ್ಗದರ್ಶನ
ಅನುಭವಿ ತರಬೇತುದಾರರಿಂದ ಮೂಲಭೂತ ಮತ್ತು ಮುಂದುವರಿದ ತರಗತಿಗಳು
ಪೂರ್ವಭಾವಿ ಮತ್ತು ಮುಖ್ಯಪರೀಕ್ಷೆಗೆ ಟೆಸ್ಟ್ ಸರಣಿ, ಆಫ್‌ಲೈನ್ & ಆನ್‌ಲೈನ್
ಆಫ್‌ಲೈನ್ ಶುಲ್ಕ: ₹ 60,000/- ₹ 54,000/- Incl. taxes
10% OFF
Early Bird Offer
ಆನ್‌ಲೈನ್ ಶುಲ್ಕ: ₹ 50,000/- ₹ 45,000/- Incl. taxes
GIRIDHAR SIR ETHICS
SHIVANAND SIR POLITY (HONORARY ADVISOR)
SHASHANK SIR GEOGRAPHY
DHRUV SIR GEOGRAPHY
NAVEEN SIR HISTORY
NANDAN SIR ENVIRONMENT & CA
MAHESH SIR ECONOMY (HONORARY ADVISOR)
PRAJWAL SIR SOCIETY
SRIKANTH SIR SCIENCE & TECHNOLOGY
VINAYAK SIR HISTORY
MAMDAPUR SIR PHYSICS
LINGARAJU SIR ESSAY
YOGANAND SIR AGRICULTURE
NINGAPPA SIR MENTAL ABILITY
SUBSCRIBE HERE
ಮಾರ್ಗದರ್ಶನದಲ್ಲಿ
ವಿನಯ್ ಕುಮಾರ್ ಜಿ ಬಿ
ಸಂಸ್ಥಾಪಕರು ಮತ್ತು ನಿರ್ದೇಶಕರು ಇನ್‌ಸೈಟ್ಸ್ ಐಎಎಸ್
08069405206
www.insightsonindia.com | instacourses.insightsonindia.com
ಬೆಂಗಳೂರು ಕಚೇರಿ: INSTA KAS , 1134/1, 2 ನೇ ಮಹಡಿ, ಶರಾವತಿ ಆಸ್ಪತ್ರೆಯ ಪಕ್ಕದಲ್ಲಿ, ಸರ್ವಿಸ್ ರಸ್ತೆ, ಅತ್ತಿಗುಪ್ಪೆ ಮೆಟ್ರೋ ನಿಲ್ದಾಣದ ಎದುರು, RPC ಲೇಔಟ್, ವಿಜಯನಗರ, ಬೆಂಗಳೂರು - 560040
support@insightsias.com
ಶಾಖೆಗಳು: ಬೆಂಗಳೂರು | ದೆಹಲಿ | ಹೈದರಾಬಾದ್ | ಶ್ರೀನಗರ | ದಾವಣಗೆರೆ